
# ಪಾಪ ನಿವಾರಣೆಯ ಬಲಿಯ ದಿನ

ಅಧ್ಯಯನ # 32



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 32

# ಪಾಪ ನಿವಾರಣೆಯ ಬಲಿಯ ದಿನ

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ನಾವು ಗುಡಾರದ ಅಭ್ಯಾಸವನ್ನು ಮುಂದುವರಿಸಲಿದ್ದೇವೆ– ಈ ಸಮಯದಲ್ಲಿ ನಾವು ಪಾಪನಿವಾರಣೆಯ ದಿನದಲ್ಲಿ ಇಸ್ರಾಯೇಲ್ಯರು ಗುಡಾರದೊಳಗೆ ಮಾಡುತ್ತಿದ್ದ ಬಲಿಗಳನ್ನು ಕುರಿತು ನೋಡಲಿದ್ದೇವೆ.

ಹೌದು! ಈ ಬಲಿಗಳು ಕ್ರೈಸ್ತರಿಗೆ ಒಂದು ವಿಶೇಷವಾದ ಅರ್ಥ ಮತ್ತು ಸೂಚನೆಗಳಾಗಿವೆ ಎಂದು ನಾವು ಈ ದಿನದ ಅಭ್ಯಾಸದಲ್ಲಿ ನೋಡಲಿದ್ದೇವೆ!

ಈಗ ನಾವು ಈ ಬಲಿಗಳ ಕುರಿತು ಕೆಳಗಿನ ವಾಕ್ಯಗಳಲ್ಲಿ ಓದೋಣ –

**ಯಾಜಕಕಾಂಡ 16:6-10**

"ಆರೋನನು ತನಗೋಸ್ಕರವಾಗಿ ತಂದ ಹೋರಿಯನ್ನು ಸಮರ್ಪಿಸಿ ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂದೋಷಪರಿಹಾರ ಮಾಡಬೇಕು. ಆ ಎರಡು ಹೋತಗಳನ್ನು ಅವನು ದೇವದರ್ಶನದ ಗುಡಾರದ ಬಾಗಿಲಲ್ಲಿ ಯೆಹೋವನ

**ಸನ್ನಿಧಿಯಲ್ಲಿ ನಿಲ್ಲಿಸಬೇಕು. ಆಗ ಅವನು ಆ ಹೋತಗಳ ವಿಷಯವಾಗಿ ಯೆಹೋವನಿಗೋಸ್ಕರವೆಂದೂ ಅಜಾಜೇಲನಿಗೋಸ್ಕರವೆಂದೂ ಚೀಟಿಗಳನ್ನು ಬರೆದುಹಾಕಬೇಕು. ಯಾವ ಹೋತ ಯೆಹೋವನದೆಂದು ಗೊತ್ತಾಗುವದೋ ಅದನ್ನು ಆರೋನನು ದೋಷಪರಿಹಾರಕ ಯಜ್ಞರೂಪವಾಗಿ ಸಮರ್ಪಿಸಬೇಕು. ಯಾವ ಹೋತ ಅಜಾಜೇಲನದೆಂದು ಗೊತ್ತಾಗುವದೋ ಅದನ್ನುಯೆಹೋವನ ಸನ್ನಿಧಿಯಲ್ಲಿಸಜೀವವಾಗಿಯೇ ನಿಲ್ಲಿಸಿ ಅದರ ಮೇಲೆ ದೋಷದೊರಿಸಿ ಅರಣ್ಯಕ್ಕೆ ಅಜಾಜೇಲನಿಗಾಗಿ ಬಿಡಿಸಿಬಿಡಬೇಕು"**

ನಾವು ಈ ಸತ್ಯವೇದದ ವಾಕ್ಯಗಳಲ್ಲಿ ನೋಡುವದೇನೆಂದರೆ –

ಮಹಾಯಾಜಕನಾದ ಆರೋನನು..... ಹೋರಿಯನ್ನು ದೋಷ ಪರಿಹಾರವಾಗಿ –

**"ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ"** ಸಮರ್ಪಿಸುತ್ತಾನೆ.

ನಂತರ ಆತನು ಎರಡು ಹೋತಗಳನ್ನು –

**"ದೇವದರ್ಶನದ ಗುಡಾರದ ಬಾಗಿಲಲ್ಲಿ"** ಯೆಹೋವನ ಸನ್ನಿಧಿಯಲ್ಲಿ ನಿಲ್ಲಿಸುತ್ತಾನೆ.

ನಂತರ ಆರೋನನು ಆ ಎರಡು ಹೋತಗಳ ವಿಷಯವಾಗಿ ಚೀಟುಗಳನ್ನು ಬರೆದುಹಾಕುತ್ತಾನೆ.

ಒಂದು ಚೀಟು **"ಯೆಹೋವನಿಗೋಸ್ಕರವೂ ಆದ ಹೋತ"**

ಮತ್ತು ಇನ್ನೊಂದು ಚೀಟು **"ಅಜಾಜೇಲನಿಗೋಸ್ಕರವೂ ಆದ ಹೋತ"**

ಯಾವ ಹೋತ ಯೇಹೋವನಿಗೋಸ್ಕರವಾಗಿ ಚೀತು ಬೀಳುತ್ತದೋ ಅದನ್ನು, ಆರೋನನು ಸಹ ದೋಷಪರಿಹಾರವಾಗಿ ಸಮರ್ಪಿಸಬೇಕು.

ಕೊನೆಯದಾಗಿ, ಯಾವ "ಹೋತ ಅಜಾಜೇಲನದೆಂದು" ಗೊತ್ತಾಗುವದೊ ಅದನ್ನು ಯೆಹೋವನ ಸನ್ನಿಧಿಯಲ್ಲಿ ಸಜೀವವಾಗಿಯೇ ನಿಲ್ಲಿಸಿ ಅದನ್ನು ಅರಣ್ಯಕ್ಕೆ ಬಿಡಿಸಿಬಿಡಬೇಕು.

**ಈ ಬಲಿಗಳು ವಾರ್ಷಿಕ ಉತ್ಸವಗಳಲ್ಲಿ ಪಾಪನಿವಾರಣಾ ಎಂದು ಕರೆಯಲ್ಪಡುವ ದಿನದಂದು ಮಾಡಲಾಗುತ್ತಿತ್ತು.**

**(ಇಬ್ರಿಯ ಭಾಷೆಯಲ್ಲಿ ಇದನ್ನು "ಯೋಮ್-ಕಿಪ್ಪೂರ್" ಎಂದು ಕರೆಯಲಾಗುತ್ತದೆ.)**



**ಈ ಪಾಪ ನಿವಾರಣಾ ಬಲಿಯ ದಿನ ಎಂದರೇನು?**

**ಈ ಬಲಿಗಳು ಏನ್ನನ್ನು ಸೂಚಿಸುತ್ತದೆ?**


**ಯೆಹೂದ್ಯ ಯುಗದ ಪಾಪ ನಿವಾರಣಾ ಬಲಿಗೂ ಮತ್ತು.....**

**ಈದಿನ ಕ್ರೈಸ್ತರಿಗೂ ಏನು ಸಂಪರ್ಕವಿದೆ?**

ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಈ ದಿನ ನಾವು ಪರಿಶೋಧಿಸಿ ನೋಡಲಿದ್ದೇವೆ!

**ಆದರೆ ಈ ವಿಶಯವನ್ನು ಕುರಿತು ಮುಂದುವರಿಯುವದಕ್ಕೆ ಮೊದಲು, ಈ ಪ್ರಶ್ನೆಯಲ್ಲಿರುವ ಒಂದು ಅಂಶವನ್ನು ಗಣನೆಗೆ ತೆಗೆದುಕೊಳೋಣ!**

ಸತ್ಯವೇದದಲ್ಲಿ ದಾಖಲಾಗಿರುವ ಈ ಎಲ್ಲಾ ಪ್ರಾಣಿಗಳ ಯಜ್ಞ ಬಲಿಯನ್ನು ಕುರಿತು ಅನೇಕ ಜನರಿಗೆ
..... ಮತ್ತು ಅನೇಕ ಕ್ರೈಸ್ತರಿಗೂ ಸಹ ಒಂದು ಯೋಚನೆ ಉಂಟಾಗುತ್ತದೆ.....
ಅದೇನೆಂದರೆ ಸತ್ಯವೇದದಲ್ಲಿರುವ ಪ್ರಾಣಿಗಳಬಲಿಗೂ ಮತ್ತು...... ಸಾಂಪ್ರದಾಯಕ ಮತ್ತು ಕ್ರೈಸ್ತಧರ್ಮದವರಲ್ಲದ ವ್ಯಕ್ತಿಗಳಾದ ಹಿಂದುಗಳು,
ಆಫ್ರಿಕಾಜನರು ಇತರೆ ಜನರು ತಮ್ಮ "ದೇವರುಗಳಿಗೆ" ಮಾಡುವ ಬಲಿಗೂ ಏನೂ ವ್ಯತ್ಯಾಸವಿಲ್ಲ!!

 **ಇದು ನಿಜವೇ?**

ಸತ್ಯವೇದದ ಬಗ್ಗೆ ಆಳವಾದ ಜ್ಞಾನವಿಲ್ಲದ ಯಾವುದೇ ಒಬ್ಬ ಕ್ರೈಸ್ತನಿಗೆ ಇದು........ ನಿಶ್ಚಯವಾಗಿಯೂ ಹಾಗೆ ಇರಬಹುದು ಅನಿಸುತ್ತದೆ – ಆದರೆ ಒಬ್ಬ ವ್ಯಕ್ತಿಯು "ಕರ್ತನ ಪುಸ್ತಕ"ವನ್ನು ಹುಡುಕಿದರೆ ಇದಕ್ಕೆ
ಉತ್ತರವನ್ನು ನಾವು ಕೆಳಗಿನ ವಾಕ್ಯದಲ್ಲಿ ಓದಬಹುದು –

**ಕೀರ್ತನೆ 50:9-10**
**“ಆದರೂ ನಿಮ್ಮ ಮನೆಗಳಿಂದ ನನಗೆ ಹೋರಿ ಬೇಕಾಗಿಲ್ಲ; ನಿಮ್ಮ ದೊಡ್ಡಿಗಳಿಂದ**

**ಹೋತ ಬೇಕಿಲ್ಲ. ಕಾಡಿನಲ್ಲಿರುವ ಸರ್ವಮೃಗಗಳೂ ಗುಡ್ಡಗಳಲ್ಲಿರುವ ಸಾವಿರಾರು ಪಶುಗಳೂ ನನ್ನವೇ."**

ಹೌದು! ಇಲ್ಲಿ ಸ್ವತಃ ದೇವರೇ ಹೇಳುತ್ತಿರುವದೇನೆಂದರೆ ಆತನಿಗೆ ಈ ಪ್ರಾಣಿಗಳ ಬಲಿಗಳು ಅವಶ್ಯವಿಲ್ಲ!

**ಹಾಗಾದರೆ ಸತ್ಯವೇದದಲ್ಲಿ ಏಕೆ ಈ ಪ್ರಾಣಿಗಳ ಬಲಿಗಳನ್ನು ಕುರಿತು ದಾಖಲಾಗಿವೆ?**

**ಇದಕ್ಕೆ ಉತ್ತರವನ್ನು ಈ ದಿನದ ಅಭ್ಯಾಸದಲ್ಲಿ ನೋಡಲಿದ್ದೇವೆ!**

ಮೊದಲನೆಯದಾಗಿ, ಪಾಪನಿವಾರಣಾದಿನದ ಬಲಿ ಎಂದರೇನು ಎಂಬ ಪ್ರಶ್ನೆಗೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

**ಯಾಜಕಕಾಂಡ 16:30,34**


**"ಯಾಕಂದರೆ ನೀವು ಪರಿಶುದ್ಧರಾಗುವದಕ್ಕಾಗಿ ಈ ದಿನದಲ್ಲಿ ನಿಮಗೋಸ್ಕರ ದೋಷಪರಿಹಾರವಾಗುವದು, ಯೆಹೋವನ ದೃಷ್ಟಿಯಲ್ಲಿ ನಿಮ್ಮ ಎಲ್ಲಾ ದೋಷಗಳು ನಿವಾರಣೆಯಾಗುವವು."**

**"ಇಸ್ರಾಯೇಲ್ಯರ ಎಲ್ಲಾ ದೋಷಗಳನ್ನು ನಿವಾರಣೆಮಾಡುವದಕ್ಕಾಗಿ ಅವರಿಗೋಸ್ಕರ ವರುಷಕ್ಕೆ** ಒಂದಾವರ್ತಿ(ಒಂದು ಸಾರಿ) **ದೋಷಪರಿಹಾರವನ್ನು ಮಾಡಬೇಕೆಂಬದೇ ನಿಮಗೆ ಶಾಶ್ವತನಿಯಮ."**

ಹೌದು! ಈ ಪಾಪನಿವಾರಣಾ ಬಲಿಯ ದಿನವು ವರ್ಷಕ್ಕೆ ಒಮ್ಮೆ ಇಸ್ರಾಯೇಲ್ಯರ ಪಾಪವನ್ನು "ಶುದ್ಧಿ"ಮಾಡಲು ಅಥವಾ" ನಿವಾರಣೆ" ಮಾಡಲು ದೇವರ "ನಿಯಮ"ವಾಗಿತ್ತು!

ಈಗ ನಾವು ಪ್ರತಿವರ್ಷ ನಡೆಯುವ ಪಾಪನಿವಾರಣಾ ಬಲಿಯನ್ನು ಕುರಿತು ವಿವರವಾಗಿ ಅಭ್ಯಾಸ ಮಾಡೋಣ.

**ಮೊದಲ ಬಲಿ ಯಾವದೆಂದರೆ –**



## ಹೋರಿ

ಇದೇ ಮೊದಲ ಬಲಿಯಾಗಿತ್ತು ಮತ್ತು ಈ ಬಲಿಗೆ ಒಂದು ಹೋರಿ ಸಮರ್ಪಿಸಲಾಗುತ್ತಿತ್ತು – ಮತ್ತು ನಾವು ಓದುವದೇನೆಂದರೆ ಮಹಾಯಾಜಕನಾದ ಆರೋನನು ಈ ಹೋರಿಯನ್ನು ".....ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ. (ವಾಕ್ಯ 6) ಸಮರ್ಪಿಸುತ್ತಿದ್ದನು.

ಈಗ ನಾವು ಆರೋನನು ಹೋರಿಯನ್ನು ಯಾವ ರೀತಿಯಲ್ಲಿ ಬಲಿಯನ್ನು ಸಮರ್ಪಿಸುತ್ತಿದ್ದನು ಎಂದು ಕೆಳಗಿನ ವಾಕ್ಯದಲ್ಲಿ ನೋಡೋಣ –

### ಯಾಜಕಕಾಂಡ 16:11-14

**"ಆರೋನನು ತನಗೋಸ್ಕರವಾದ ದೋಷಪರಿಹಾರಕದಯಜ್ಞದ ಹೋರಿಯನ್ನು ಸಮರ್ಪಿಸಿ ತನಗೋಸ್ಕರವೂ ತನ್ನಮನೆತನದವರಿಗೋಸ್ಕರವೂ ದೋಷಪರಿಹಾರ ಮಾಡಬೇಕು. ಅವನು ತನಗೋಸ್ಕರವಾದ ಹೋರಿಯನ್ನು ವಧಿಸಿದ ಮೇಲೆ ಯೆಹೋವನ ಸನ್ನಿಧಿಯಲ್ಲಿರುವ ವೇದಿಯಿಂದ ಕೆಂಡಗಳನ್ನು ಧೂಪಾರತಿಯಲ್ಲಿ ತುಂಬಿಸಿ ಪರಿಮಳಧೂಪ ದ್ರವ್ಯದ ಚೂರ್ಣದಲ್ಲಿ ಎರಡು ಹಿಡಿ ತೆಗೆದು ಕೊಂಡು ತೆರೆಯನ್ನು ದಾಟಿ ಆ ಧೂಪವನ್ನು ಯೆಹೋವನ ಸನ್ನಿಧಿಯಲ್ಲಿಯೇ ಕೆಂಡಗಳ ಮೇಲೆ ಹಾಕಬೇಕು. "ಆಗ ಆಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವ ಭಾಗದ ಮೇಲೆ ಬೆರಳಿನಿಂದ ಚಿಮಿಕಿಸಿ ಕೃಪಾಸನದ ಎದುರಾಗಿಯೂ ಏಳು ಸಾರಿ ಚಿಮಿಕಿಸಬೇಕು."**

ಈ ವಾಕ್ಯವು ಮಹಾಯಾಜಕನಾದ ಆರೋನನು "ಹೋರಿ"ಯನ್ನು ಬಲಿಕೊಡುವ ವಿಧಾನವನ್ನು ವಿವರವಾಗಿ ತಿಳಿಸುತ್ತದೆ.

**ಈ ವಿಷಯವನ್ನು ನೀವು ಅರ್ಥಮಾಡಿಕೊಂಡಿರಾ?? ಇಲ್ಲ?**

ಒಳ್ಳೆಯದು, ಈ ವಾಕ್ಯಗಳನ್ನು ನೀವು ಒಟ್ಟಿಗೆ ಓದಿದಾಗ ಅರ್ಥಮಾಡಿಕೊಳ್ಳುವದು ಬಹಳ ಕಷ್ಟವಾಗುತ್ತದೆ!!

ಈ ವಿಷಯವನ್ನು ನಾವು ಚೆನ್ನಾಗಿ ಅರ್ಥಮಾಡಿಕೊಳ್ಳಲು ಗುಡಾರದ ಮೂರೂ ಸ್ಥಳಗಳಲ್ಲಿ ಆರೋನನು "ಹೋರಿ"ಯನ್ನು ಬಲಿಕೊಡಲು ಹೇಗೆ ಹೋಗುತ್ತಾನೆಂದು ಹೆಜ್ಜೆಹೆಜ್ಜೆಯಾಗಿ ನೋಡೋಣ –

## - ಅಂಗಳದ - ಒಳಗೆ

**ಯಾಜಕಕಾಂಡ 16:11-12**

**"ಆರೋನನು ತನಗೋಸ್ಕರವಾದ ದೋಷಪರಿಹಾರಕದಯಜ್ಞದ ಹೋರಿಯನ್ನು ಸಮರ್ಪಿಸಿ ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ ದೋಷಪರಿಹಾರ ಮಾಡಬೇಕು. ಅವನು ತನಗೋಸ್ಕರವಾದ ಹೋರಿಯನ್ನು ವಧಿಸಿದ ಮೇಲೆ ಯೆಹೋವನ ಸನ್ನಿಧಿಯಲ್ಲಿರುವ ವೇದಿಯಿಂದ ಕೆಂಡಗಳನ್ನು ಧೂಪಾರತಿಯಲ್ಲಿ ತುಂಬಿಸಿ ಪರಿಮಳಧೂಪ ದ್ರವ್ಯದ ಚೂರ್ಣದಲ್ಲಿ ಎರಡು ಹಿಡಿ ತೆಗೆದು ಕೊಂಡು ತೆರೆಯನ್ನು ದಾಟಿ"**



ಹೌದು! ಇಲ್ಲಿ ನಾವು ವಿವರವಾಗಿ ಓದುತ್ತೇವೆ –

ಮೊದಲು ಆರೋನನು
"ಅಂಗಳದ" ಒಳಗೆ
"ಪವಿತ್ರ"ಸ್ಥಾನದ "ಬಾಗಿಲ"ಬಳಿ
ದೋಷಪರಿಹಾರಕ್ಕಾಗಿ
ಹೋರಿಯನ್ನು ಬಲಿಕೊಟ್ಟು
ಸಮರ್ಪಿಸುತ್ತಾನೆ.



.....ಆತನು ಹೋರಿಯ "ರಕ್ತವನ್ನು ತೆಗೆದುಕೊಳ್ಳುತ್ತಾನೆ.

......ನಂತರ ಆತನು ಕೆಂಡಗಳನ್ನು ತೆಗೆದುಕೊಳ್ಳುತ್ತಾನೆ –

ಯಜ್ಞವೇದಿಯಿಂದ ಕೆಂಡಗಳನ್ನು ತೆಗೆದುಕೊಳ್ಳುತ್ತಾನೆ –

.....ಮತ್ತು ಅದನ್ನು ಧೂಪಾರತಿಯಲ್ಲಿ ತುಂಬಿಸಿ "ಪರಿಮಳಧೂಪ ದ್ರವ್ಯದ ಚೂರ್ಣದಲ್ಲಿ ಎರಡು ಹಿಡಿ ತೆಗೆದುಕೊಳ್ಳುತ್ತಾನೆ."

ನಂತರ ಇವೆಲ್ಲದರ ಜೊತೆಗೆ.... ಆರೋನನು ಮೊದಲ ತೆರೆಯ ಮೂಲಕ "ಪವಿತ್ರ" ಸ್ಥಳದೊಳಗೆ ಪ್ರವೇಶಿಸುತ್ತಾನೆ.


ಈಗ ಆರೋನನು ಈ "ಪವಿತ್ರಸ್ಥಳದಲ್ಲಿ" ಏನು ಮಾಡುತ್ತಾನೆಂದು ನೋಡೋಣ –

## ಪವಿತ್ರ - ಸ್ಥಳದೊಳಗೆ

**ಯಾಜಕಕಾಂಡ 16:13**

**" ಆಗ ಆಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವ ಭಾಗದ**

**ಮೇಲೆ ಬೆರಳಿನಿಂದ ಚಿಮಿಕಿಸಿ**
**ಕೃಪಾಸನದ ಎದುರಾಗಿಯೂ ಏಳು ಸಾರಿ ಚಿಮಿಕಿಸಬೇಕು."**



ಹೌದು! ಪವಿತ್ರಸ್ಥಳದಲ್ಲಿ ಆರೋನನು –

ಚಿನ್ನದ ಧೂಪವೇದಿಯ ಮೇಲೆ ಬೆಂಕಿಯಿಂದ ಕೂಡಿದ ಇಜ್ಜಲು ತೆಗೆದುಹಾಕುತ್ತಾನೆ.

.....ನಂತರ ಆ ಬೆಂಕಿಯಿಂದಕೂಡಿದ "ಇಜ್ಜಲಿನ" ಮೇಲೆ "ಸುಗಂಧವಾಸನೆಯ ಪುಡಿಮಾಡಿದ ಧೂಪವನ್ನು" ಹಾಕುತ್ತಾನೆ.

.....ಅದು ಸುಗಂಧವಾಸನೆಯೊಂದಿಗೆ.....ಹೊಗೆಯಾಗಿ ಮೇಲೆ ಎದ್ದು "ಪರಿಶುದ್ಧ ಸ್ಥಳದಲ್ಲಿ" ತುಂಬಿಕೊಳ್ಳುತ್ತದೆ. ಮತ್ತು....

ಇನ್ನೂ ಅದು ಮಹಾಪರಿಶುದ್ಧಸ್ಥಳದಲ್ಲಿಯೂ ಪ್ರವೇಶಿಸುತ್ತದೆ.

....... ಈ ಹೊಗೆಯು "ಆರೋನನು ಸಾಯದಹಾಗೆ" "ಕೃಪಾಸನವನ್ನು ಮರೆಮಾಡುತ್ತದೆ".

...... ಕೊನೆಯದಾಗಿ ಆರೋನನು ರಕ್ತದೊಂದಿಗೆ "ಮಹಾ ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸುತ್ತಾನೆ.

ಈಗ ನಾವು ಆರೋನನು "ಮಹಾ ಪರಿಶುದ್ಧ ಸ್ಥಳದಲ್ಲಿ" ಏನು ಮಾಡಿದನೆಂದು ನೋಡೋಣ –

# "ಮಹಾಪವಿತ್ರ" ಸ್ಥಳದೊಳಗೆ

**ಯಾಜಕಕಾಂಡ 16:14**


**"ಆಗ ಆಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವ ಭಾಗದ ಮೇಲೆ ಬೆರಳಿನಿಂದ ಚಿಮಿಕಿಸಿ ಕೃಪಾಸನದ ಎದುರಾಗಿಯೂ ಏಳು ಸಾರಿ ಚಿಮಿಕಿಸಬೇಕು."**

ಹೌದು! ಹಾಗಾದರೆ ಆರೋನನು "ಮಹಾಪವಿತ್ರ"ಸ್ಥಳದೊಳಗೆ ಹೋದ ಮೇಲೆ –

- .......ಹೋರಿಯ ರಕ್ತವನ್ನು ಆತನೊಂದಿಗೆ ತೆಗೆದುಕೊಂಡು ಹೋಗುತ್ತಾನೆ.
- .......ಕೃಪಾಸನದ ಮೇಲೆ ರಕ್ತವನ್ನು ಚಿಮಿಕಿಸುತ್ತಾನೆ.
- ........ಕೃಪಾಸನದ ಪೂರ್ವ ಭಾಗದ ಮೇಲೆ ಮತ್ತು ಕೃಪಾಸನದ ಎದುರಾಗಿಯೂ ಆ ರಕ್ತವನ್ನು ಚಿಮಿಕಿಸುತ್ತಾನೆ.
- ಆತನು "ಏಳು ಸಾರಿ" ಚಿಮಿಕಿಸುತ್ತಾನೆ.

**ಇವೆಲ್ಲದರ ಅರ್ಥವೇನು?**

ಒಬ್ಬ ವ್ಯಕ್ತಿ ಕೃಪಾಸನದ ಮಂಜೂಷದ ಪೆಟ್ಟಿಗೆ ಮುಂದೆ ಪಶ್ಚಿಮ ದಿಕ್ಕಿಗೆ ಎದುರಾಗಿ ನಿಲ್ಲುತ್ತಾನೆ.






ಮತ್ತು ಆತನು ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಪ್ರವೇಶಿಸಿ ಒಳಗೆ ಬರುತ್ತಾನೆ.
(ಗುಡಾರದ ಬಾಗಿಲು ಪೂರ್ವದಿಕ್ಕಿನಲ್ಲಿದೆ ಎಂದು ನೆನಪಿಡಿರಿ)

ಕೃಪಾಸನದ ಮೇಲೆ ಪೂರ್ವದಿಕ್ಕಿಗೆ ಚಿಮಿಕಿಸುವುದೆಂದರೆ

ಆರೋನನ ನಿಂತಿರುವ ದಿಕ್ಕಿನ ಕಡೆಗೆ ಮತ್ತು......

"ಕೃಪಾಸನದ ಎದುರಾಗಿಯೂ" ಎಂದರೆ ಆ ವ್ಯಕ್ತಿಗೆ ಅಡ್ಡಲಾಗಿ ಎಂದಾಗುತ್ತದೆ.

ಆಹ್! ಇವೆರಡೂ ಜೋಡಿಸುವಾಗ......ಶಿಲುಬೆ ಆಕಾರವಾಗುತ್ತದೆ!

ಇದು ಹೇಗೆಂದು ಕೆಳಗಿನ ಚಿತ್ರದಲ್ಲಿ ನೋಡೋಣ –




ಈ ಚಿಮಿಕಿಸುವ ವಿಧಾನವು ಶಿಲುಬೆಯ ಆಕಾರದಲ್ಲಿ ಉಂಟಾಗುತ್ತದೆ, ಆತನು ಏಳು ಸಾರಿ ಈ ರೀತಿಯಾಗಿ ಚಿಮಿಕಿಸುತ್ತಾನೆ

**......ಹೇಳಬೇಕೆಂದರೆ ಏಳು ಶಿಲುಬೆಯ ಆಕಾರವನ್ನುಂಟುಮಾಡತ್ತಾನೆ!**

## ಆದ್ದರಿಂದ ಈ ಹೋರಿ ಬಲಿಯ ವಿಧಾನವು ಪೂರ್ಣಗೊಳ್ಳುತ್ತದೆ!

ಇದಾದ ನಂತರ ಎರಡನೆಯ ಯಜ್ಞದಬಲಿಯಾದ "ಕರ್ತನ ಹೋತ"ವನ್ನು ದೋಷಪರಿಹಾರವಾಗಿ ಸಮರ್ಪಿಸುತ್ತಾನೆ.

ಆದರೆ ಈ ಬಲಿ ಮತ್ತು ಇದರ ವಿವರಗಳನ್ನು ನೋಡುವದಕ್ಕೆ ಮುಂಚೆ ಮೊದಲು......
ಈ ಸುವಾರ್ತಾಯುಗದಲ್ಲಿರುವ
ಕ್ರೈಸ್ತರಿಗೆ ಈ ಮೊದಲ "ಹೋರಿ"ಯ ಬಲಿಯು ಏನ್ನನ್ನು ಸೂಚಿಸುತ್ತದೆ.

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

### ಇಬ್ರಿಯರಿಗೆ 10:1 and 4

**"ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು."**

**"ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ."**

**ಇದನ್ನು ನೀವು ನೋಡಿದಿರಾ?!**

**ಆದ್ದರಿಂದ ಈ "ಹೋರಿಗಳ ಮತ್ತು ಹೋತಗಳ" ಯಜ್ಞ ಬಲಿಗಳು ನಿಜವಾಗಿಯೂ
.......ಪಾಪಗಳನ್ನು ಪರಿಹಾರಮಾಡಲಾಗುವುದಿಲ್ಲ!!!**

**ಹಾಗಾದರೆ ಅವುಗಳ.......ಉದ್ದೇಶವೇನು?**

**ಇದಕ್ಕೆ ಉತ್ತರವನ್ನು 1ನೇ ವಾಕ್ಯದಲ್ಲಿ ನೋಡುತ್ತೇವೆ.
".....ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ......."
"ಹೌದು! ಈ ಯಜ್ಞಬಲಿಗಳು ದೇವರ ಯೋಜನೆಯಲ್ಲಿ ಮುಂದೆ ಬರಬೇಕಾಗಿದ್ದ" ಮೇಲುಗಳ "ಛಾಯೆಗಳು" ಅಥವಾ "ನೆರಳು" ಗಳಾಗಿವೆ.**

## ಹಾಗೆಂದರೆ, ಅದರ ಅರ್ಥವೇನು?

ಇಲ್ಲಿ "ಅಪೋಸ್ತಲನಾದ ಪೌಲನು" ಮುಂದೆ ಬರಬೇಕಾಗಿದ್ದ ಮೇಲುಗಳ" ಕುರಿತು ಸೂಚಿಸುವದೇನೆಂದರೆ

### ದೇವರ ರಕ್ಷಣೆಯ ಯೋಜನೆ

ಈ ಯೋಜನೆಯು ದೇವರ ಒಬ್ಬನೇ ಮಗನಾದ ಯೇಸು ಬಂದು ಈಡು ಬಲಿಯ ಮೂಲಕ ಈ ಲೋಕವನ್ನು ಬಿಡುಗಡೆ ಮಾಡುವದನ್ನು ಸ್ಪಷ್ಟವಾಗಿ ಮತ್ತು ಹೆಚ್ಚಿನ ಕೆಲಸಮಾಡುವದನ್ನು ನೋಡುತ್ತೇವೆ.

ಧರ್ಮಶಾಸ್ತ್ರವು ಈ ವಿಷಯಗಳನ್ನು ಅಸ್ಪಷ್ಟವಾದ ರೀತಿಯಲ್ಲಿ ತೋರಿಸಿತು.

ಇದನ್ನೇ "ಛಾಯೆಗಳು" ಅಥವಾ "ನೆರಳು"ಗಳೆಂದು ಅರ್ಥವಾಗುತ್ತದೆ.

**ಈಗ ಪಾಪನಿವಾರಣಾ ದಿನದ "ಹೋರಿಯ" ಬಲಿಯು**
**ಯಾವ ರೀತಿಯಾದ "ಛಾಯೆ"**
**ಅಥವಾ ನೆರಳ"ನ್ನು ಸೂಚಿಸುತ್ತದೆ?**

ಅದನ್ನು ನೋಡುವದಕ್ಕೆ ಮುಂಚೆ ಹಳೆಯ ಒಡಂಬಡಿಕೆಯ ಇನ್ನೊಂದು ಉದ್ದೇಶವನ್ನು ಕುರಿತು ಈಗ ನಾವು ಅಭ್ಯಾಸ ಮಾಡೋಣ –

ಅದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

### ರೋಮಾಪುರದವರಿಗೆ 15:4

**“ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರ ಚಿತ್ತವನ್ನು ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆಗ್ರಂಥಗಳು ಬರೆಯಲ್ಪಟ್ಟಿತು.”**

**ನೋಡಿದಿರಾ?!**

ಇಡೀ ಹಳೆಯ ಒಡಂಬಡಿಕೆಯು "ನಮಗಾಗಿ" ಬರೆದಿದೆ ಮತ್ತು ದಾಖಲಾಗಿದೆ –

.......ಸುವಾರ್ತಾಯುಗದ ಕ್ರೈಸ್ತ ಸಭೆಗಾಗಿ!

**ಹೌದು! ಹಾಗಾದರೆ ಯಾವ “ಛಾಯೆಗಳು” ಮತ್ತು ......“ಪಾಠಗಳನ್ನು” ಕ್ರೈಸ್ತರಾದ ನಾವು ಈ ಪಾಪನಿವಾರಣಾ ಬಲಿಗಳ**

**ದಿನದಿಂದ ಕಲಿತುಕೊಳ್ಳಲಿದ್ದೇವೆ?**

ಬನ್ನಿ ನೋಡೋಣ –

ನಾವು ಏನು ಓದುತ್ತೇವೆಂದರೆ ಇಸ್ರಾಯೇಲ್ಯರಿಗಿರುವ ಈ ಪಾಪನಿವಾರಣಾ ಬಲಿಯ ದಿನದ ಉದ್ದೇಶವು ಏನೆಂದರೆ..... ಕರ್ತನ ಮುಂದೆ ಅವರ ಎಲ್ಲಾ ಪಾಪಗಳು ಶುದ್ಧವಾಗಬೇಕು.

ಇದು ದೇವರಿಗೂ ಮತ್ತು ಆದಾಮನ ಮಕ್ಕಳಾದ ಎಲ್ಲಾ ಮನುಷ್ಯಜಾತಿಗೂ ನಡುವೆ ಮುಂದೆ ಬರಬೇಕಾದ ಮಹಾ ಪಾಪನಿವಾರಣೆಯನ್ನು ಸೂಚಿಸುತ್ತದೆ!

**ಹೌದು! ದೇವರು...... ಮತ್ತು ಮನುಷ್ಯನು ಒಂದಾಗುವದು.**

ಹಾಗೆಯೇ "ಹೋರಿ" ಮತ್ತು "ಹೋತಗಳ" ಮೂಲಕ ಛಾಯೆಯ ಪಾಪ ನಿವಾರಣೆಯು ಛಾಯೆಯ ಯಜ್ಞ ಬಲಿಗಳು ನಡೆಯುತ್ತಿದ್ದವು –

........ಅವುಗಳು ನಿಜವಾಗಿಯೂ ಲೋಕದ ಪಾಪಗಳನ್ನು ತೊಳೆಯುತ್ತಿದ್ದವು!

ಇದನ್ನು ಕುರಿತು ಸತ್ಯವೇದದಲ್ಲಿ...... "ಉತ್ತಮವಾದ ಯಜ್ಞಗಳು" ಎಂದು ಸೂಚಿಸಲಾಗುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಇಬ್ರಿಯರಿಗೆ 9:23**

**"ಪರಲೋಕವಸ್ತುಗಳಿಗೆ ಪ್ರತಿರೂಪವಾಗಿರುವ ವಸ್ತುಗಳ ಶುದ್ಧೀಕರಣಕ್ಕಾಗಿ ಇಂಥಾ ಯಜ್ಞಗಳು ಅವಶ್ಯವಾದರೂ ಸಾಕ್ಷಾತ್ ಪರಲೋಕದವುಗಳಿಗೆ ಇವುಗಳಿಗಿಂತ ಉತ್ತಮವಾದ ಯಜ್ಞಗಳು ಬೇಕು."**

ಈಗ ನಾವು ಈ ಛಾಯೆಗಳ ಮೂಲಕ ಈ "ಉತ್ತಮವಾದ ಯಜ್ಞಗಳನ್ನು" ಕುರಿತು ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳೋಣ!!

**ಈ ಒಂದೇ ಒಂದು 'ಹೋರಿ'ಯ ಯಜ್ಞಬಲಿಯು ಯಾರನ್ನು ಸೂಚಿಸುತ್ತದೆ?**



ಆಹಾ! ಹೌದು! "ಹೋರಿಯ" ಯಜ್ಞಬಲಿಯು ನಮ್ಮ ಕರ್ತನಾದ ಯೇಸು ಕ್ರಿಸ್ತನು "ಎಲ್ಲರಿಗಾಗಿ ಕೊಟ್ಟಂತಹ ಈಡುಬಲಿ"ಯ ಮಹಾ ಯಜ್ಞವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**1 ತಿಮೊಥೆಯನಿಗೆ 2:5,6**

**"ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯನಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು."**

ಹೌದು! ಆತನ ಜೀವವನ್ನು "ಸರಿಸಮಾನವಾದ ಬೆಲೆ"ಯಾದ ಈಡುಬಲಿಯನ್ನು ಕೊಟ್ಟನು.

ಈ ಲೋಕದ ಪಾಪಗಳಿಗೆ ಆತನು ಪರಿಪೂರ್ಣವಾದ ಪಾಪನಿವಾರಣೆಯನ್ನು ಮಾಡಿದನು.

ಇದನ್ನು ಕುರಿತು ಸ್ಪಷ್ಟವಾಗಿ ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಇಬ್ರಿಯರಿಗೆ 9:26

**"ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞ ಮಾಡಿಕೊಳ್ಳವವನಾಗಿ ಪ್ರತ್ಯಕ್ಷನಾದನು."**

ಇಲ್ಲಿ ಸ್ಪಷ್ಟವಾಗಿ ಕೊಟ್ಟಿರುವದೇನೆಂದರೆ ಎಲ್ಲಾ ಮನುಷ್ಯಜಾತಿಗೋಸ್ಕರ ಯೇಸು "ತನ್ನನ್ನೇ" ಪಾಪನಿವಾರಣಾ ಬಲಿಯಾಗಿ ಸಮರ್ಪಿಸಿದನು.

ಅಪೊಸ್ತಲನು ಹೀಗೆ ಹೇಳುವದನ್ನು ಕುರಿತು ಕೆಲವರು ಹೀಗೆ ಆಶ್ಚರ್ಯಪಡಬಹುದು......

**"ಯುಗಗಳ ಸಮಾಪ್ತಿಯಲ್ಲೇ"**

**ಯೇಸು ಎರಡನೆಯ ಲೋಕದ ಸಮಾಪ್ತಿಯಲ್ಲಿ ಪಾಪನಿವಾರಣೆ ಬಲಿದಾನ ಮಾಡಿದರೆ?**

ಅದು ಹಾಗಲ್ಲ ಎಂದು ತಿಳಿದದೆ, ಏಕೆಂದರೆ......ಯೇಸು ಮರಣ ಹೊಂದಿ ಸುಮಾರು 2000 ವರ್ಷಗಳಾಗಿವೆ. ಆದರೂ ಎರಡನೆಯ ಲೋಕವು ಇನ್ನೂ ಕೊನೆಗೊಂಡಿಲ್ಲ!!

ಈ ವಿಷಯಕ್ಕೆ ಉತ್ತರವನ್ನು ಗ್ರೀಕ್ ಪದದಲ್ಲಿ ಉಪಯೋಗವಾಗಿರುವದನ್ನು ನೋಡುತ್ತೇವೆ –

**(ಏಆನ್) (ಸ್ಟ್ರಾಂಗ್ಸ್ – ಗ್ರೀಕ್ # 165)**

ಇದೂ ಸಹ "ಯುಗ" ಎಂದೇ ಅರ್ಥ ಕೊಡುತ್ತದೆ ಮತ್ತು ಅಪೊಸ್ತಲನಾದ ಪೌಲನು ಇಬ್ರಿಯರಿಗೆ ಪತ್ರಿಕೆ ಬರೆಯುವಾಗ ಯೇಸುವಿನ ಪಾಪನಿವಾರಣಾ ಬಲಿಯು

**......ಯೆಹೂದ್ಯಯುಗದ ಸಮಾಪ್ತಿಯಲ್ಲಿ ಎಂದು ಸೂಚಿಸುತ್ತಾನೆ.**

ಇದೇ ರೀತಿಯಲ್ಲಿ ನಾವು ಇಬ್ರಿಯರಿಗೆ **1:2**ರಲ್ಲಿ "ಈ ಅಂತ್ಯದಿನಗಳಲ್ಲಿ" ಎಂಬ ಸೂಚನೆಯು ಸುವಾರ್ತಾ ಯುಗದ ಅಥವಾ ಎರಡನೆಯ ಲೋಕದ ಅಂತ್ಯವಲ್ಲ ಆದರೆ ಅದು ಯೆಹೂದ್ಯ ಯುಗದ ಅಂತ್ಯದ ಸೂಚನೆ ಎಂದು ನೋಡುತ್ತೇವೆ!!

ಈ ಹೋರಿಯ ಪಾಪನಿವಾರಣಾ ಬಲಿಯ ವಿಧಾನವನ್ನು ಈಗ ತಾನೆ ನೋಡಿದೆವು. ಇದು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮಹಾ ಯಜ್ಞ ಬಲಿಯ ಎಲ್ಲಾ ವಿವರಗಳಿಗೆ ಸೂಚನೆಯಾಗಿದೆ.

ಆದ್ದರಿಂದ ಜಾಗರೂಕತೆಯಿಂದ ಈ ಪಾಪನಿವಾರಣಾ ಬಲಿಯ ದಿನದ ಛಾಯೆಯನ್ನು ಕುರಿತು ಅಭ್ಯಾಸ ಮಾಡುವಾಗ ನಮ್ಮ ಕರ್ತನ ಮಹಾಯಜ್ಞ ಬಲಿಯ ಅತಿತೊಡಕಿನ ವಿಷಯಗಳನ್ನು ಸಹ ನಾವು ಕಲಿಯಬಹುದು.

ಈಗ ನಾವು ಛಾಯೆಗಳ ಅರ್ಥಗಳು ಮತ್ತು ಸೂಚನೆಗಳನ್ನು ಕುರಿತು ನೋಡೋಣ –

# "ಹೋರಿ"



ಇದು ಅನೇಕರಿಗೆ ಆಶ್ಚರ್ಯವಾಗಿಯೂ ಮತ್ತು....... ಕೆಲವರಿಗೆ ಗಾಬರಿ ಯಾಗಬಹುದು. ಅದೇನೆಂದರೆ ಯೇಸುವನ್ನು ಒಂದು ಹೋರಿಗೆ ಛಾಯೆಯಾಗಿ ಅಥವಾ ಹೋಲಿಕೆಯಾಗಿ ಕೊಡಲಾಗಿದೆ!

ಆದರೆ ನಾವು ನೆನಪಿನಲ್ಲಿಡಬೇಕಾದದ್ದು ಏನೆಂದರೆ **ಇದು ನಮ್ಮ ಕರ್ತನ ಯಜ್ಞಬಲಿಯ** ಒಂದು ಚಿತ್ರಣವಾಗಿದೆ.



**ಮತ್ತು ಆತನು ಏನ್ನನ್ನು ಯಜ್ಞ ಬಲಿಯಾಗಿ ಸಮರ್ಪಿಸಿದನು?**

ಹೌದು! ಅದು ಆತನ ಪರಿಪೂರ್ಣವಾದ ಶಾರಿರೀಕ ಸ್ವಭಾವವಾಗಿದೆ!

ಮತ್ತು ನಮ್ಮ ಕರ್ತನ ಶಾರಿರೀಕ ಸ್ಥಿತಿಯನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಇಬ್ರಿಯರಿಗೆ 7:26 – "ಈತನು ಪರಿಶುದ್ಧನೂ ನಿರ್ದೋಷಿಯೂ, ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ......."**

ಹೌದು! "ಹೋರಿ"ಯು ಪರಿಪೂರ್ಣ ಮನುಷ್ಯ ಸ್ವಭಾವ ಅಥವಾ.....
ಪರಿಪೂರ್ಣ ಮನುಷ್ಯನಿಗೆ ಹೋಲಿಕೆಯಾಗಿದೆ.

ಈ ಸಂಕೇತವನ್ನು ನೆನಪಿನಲ್ಲಿಟ್ಟುಕೊಳ್ಳುವದು ಬಹಳ ಉಪಯೋಗವಾಗಿದೆ ಏಕೆಂದರೆ, ಸತ್ಯವೇದ ಪುಸ್ತಕದ ಬೇರೆ ಭಾಗಗಳಲ್ಲಿ ಇದು ಕಾಣಿಸಿಕೊಳ್ಳುವುದರಿಂದ ಸತ್ಯವನ್ನು ನಾವು "ಸರಿಯಾಗಿ ಅರ್ಥಮಾಡಿ" ಉಪಯೋಗಿಸಲು ಉಪಯುಕ್ತವಾಗಿದೆ.

## "ಮಹಾಯಾಜಕನಾದ ಆರೋನನು"

ಈಗ ಯೇಸು ಆ ಹೋರಿಯಾದರೆ, ಹೋರಿಯನ್ನು ಕೊಲ್ಲುವ ಆ ಮಹಾಯಾಜಕನಾದ ಆರೋನನು ಯಾರನ್ನು ಸೂಚಿಸುತ್ತದೆ.

ಇದಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ–

### ಇಬ್ರಿಯರಿಗೆ 5:5,6

**"ಹಾಗೆಯೇ ಕ್ರಿಸ್ತನು ಸಹ ತನ್ನನ್ನು ಘನಪಡಿಸಿಕೊಂಡು ತನ್ನನ್ನು ತಾನೇ ಮಹಾಯಾಜಕನನ್ನಾಗಿ ಮಾಡಿಕೊಳ್ಳಲಿಲ್ಲ; ಆದರೆ – ನನಗೆ ನೀನು ಮಗನು; ನಾನೇ ಈಹೊತ್ತು ನಿನ್ನನ್ನು ಪಡೆದಿದ್ದೇನೆ ಎಂದು ಹೇಳಿದಾತನೇ ಈ ಗೌರವವನ್ನು ಆತನಿಗೆ ಕೊಟ್ಟನು. ಆತನು ಇನ್ನೊಂದು ಸ್ಥಳದಲ್ಲಿ – ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು ಎಂದು ಹೇಳುತ್ತಾನೆ."**

ಆಹ್! ಹೌದು! ಮಹಾಯಾಜಕನಾದ ಆರೋನನು ಕೇವಲ ಒಂದು ಸಾಂಕೇತಿಕವಾಗಿದೆ, ಆದರೆ ಸ್ವತಃ ದೇವರು ನೇಮಿಸಿದ ನಿಜವಾದ ಮಹಾಯಾಜಕನು...... ಸ್ವತಃ ಕರ್ತನಾದ ಯೇಸು ಕ್ರಿಸ್ತನು.


**ಈಗ ಹೇಗೆ ಯೇಸು ಯೇಸುವನ್ನೇ ಕೊಲ್ಲಲು ಅಥವಾ ಯಜ್ಞಬಲಿಯಾಗಿ ಅರ್ಪಿಸಲುಸಾಧ್ಯವೆಂದು ನೀವು ಆಶ್ಚರ್ಯಪಡಬಹುದು???**

ಈಗ ಅದಕ್ಕೆ ಉತ್ತರವನ್ನು ನೋಡೋಣ.......

**"ಆರೋನನು ಹೋರಿಯನ್ನು ವಧಿಸಿದನು."**

ಇದು ಯೇಸುವಿನ ದೀಕ್ಷಾಸ್ನಾನದಲ್ಲಿ ನಡೆದ ವಿಷಯಕ್ಕೆ ಸಂಕೇತವಾಗಿದೆ!

ಹೌದು! ಆತನ 30ನೇಯ ವರ್ಷದ ವಯಸ್ಸಿನ ಶಾರೀರಿಕ ಜೀವಿತದಲ್ಲಿ ಆತನು ಮಾಡಿದ "ಮರಣದ ಒಡಂಬಡಿಕೆ"ಗೆ ಸಂಕೇತವಾಗಿದೆ ಮತ್ತು ಆತನು ಹೇಳಿದ ಮಾತನ್ನು ಕೆಳಗಿನ ವಾಕ್ಯದಲ್ಲಿ ದಾಖಲಾಗಿದೆ –



**ಇಬ್ರಿಯರಿಗೆ 10:7**

**"ಆಗ ನಾನು – ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂದು ಹೇಳಿದನು."**

ಹೌದು! ಯೇಸು ಈ ರೀತಿಯಾಗಿ ತನ್ನ ದೀಕ್ಷಾಸ್ನಾನದ ಸಮಯದಲ್ಲಿ ಹೇಳುವಾಗ ಆತನು ತನ್ನ ಶಾರೀರಿಕ ಸ್ವಭಾವವನ್ನು ಯಜ್ಞಬಲಿಯಾಗಿ ಅರ್ಪಿಸಿ ತನ್ನನ್ನೇ "ಕೊಂದನು"!

"ಹೋರಿ"ಯನ್ನು "ಅಂಗಳ"ದಲ್ಲಿ ಬಲಿಯಾಗಿ ಅರ್ಪಿಸಲಾಗುತ್ತಿತ್ತು.

ಇದು ಯೇಸುವಿನ ಪರಿಪೂರ್ಣ ಮತ್ತು ಪಾಪವಿಲ್ಲದ ಸ್ಥಿತಿಯನ್ನು ಸೂಚಿಸುತ್ತದೆ. ಏಕೆಂದರೆ ಅಂಗಳವು ಪರಿಪೂರ್ಣ ಮನುಷ್ಯ ಸ್ವಭಾವವನ್ನು ಸೂಚಿಸುತ್ತದೆ. ನಂತರ ನಾವು ಹೀಗೆ ಮುಂದುವರಿಯುತ್ತೇವೆ.......

## "ಪರಿಮಳಧೂಪದ್ರವ್ಯದ ಚೂರ್ಣ"

ಆರೋನನ ಕೈಯಲ್ಲಿ ಕೊಂಡೊಯ್ಯುವ ಈ ಧೂಪದ್ರವ್ಯವು ಯೇಸು ತನ್ನ ದೀಕ್ಷಾಸ್ನಾನದಲ್ಲಿ ಏನನ್ನು ಹೊಂದಿದ್ದನೋ ಅದನ್ನು ಸೂಚಿಸುತ್ತದೆ!

ಹೌದು! ಅದೇನೆಂದರೆ ಯೇಸು ತನ್ನ 30ನೇ ವಯಸ್ಸಿನವರೆಗೂ ಬೆಳೆಸಿಕೊಂಡಿದ್ದಂತಹ ಗುಣಲಕ್ಷಣಗಳು.

12 ರಿಂದ 30 ವಯಸ್ಸಿನ ಆತನ ಜೀವಿತದ ಸಾಕ್ಷಿಯನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ 2:52**

**"ಯೇಸು ಜ್ಞಾನದಲ್ಲಿಯೂ ದೇಹ ಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹಚ್ಚಾಗುತ್ತಾ ಬಂತು."**

ಹೌದು! ಯೇಸು ಬೆಳೆಸಿಕೊಂಡ ಈ ಗುಣಲಕ್ಷಣವನ್ನು ಪರಿಮಳಧೂಪದ್ರವ್ಯದ "ಚೂರ್ಣ"ವೆಂದು ವರ್ಣಿಸಲಾಗಿದೆ. ಇದರ ಅರ್ಥ ಏನೆಂದರೆ ಆತನು ಬೆಳೆಸಿಕೊಂಡ ಗುಣಲಕ್ಷಣಗಳು ಶುದ್ಧವಾಗಿಯೂ ಮತ್ತು ಪರಿಪೂರ್ಣವಾಗಿಯೂ ಇವೆ.

## "ಎರಡು ಹಿಡಿ"

ಇದು ಒಬ್ಬ ವ್ಯಕ್ತಿಯ ಅಧಿಕವಾದ ಮೊತ್ತ ಸಾಮರ್ಥ್ಯವನ್ನು ಸೂಚಿಸುತ್ತದೆ. ಆದ್ದರಿಂದ ಇದು ಯೇಸು ತನ್ನ ಗುಣಲಕ್ಷಣವನ್ನು ಅಧಿಕವಾದ ಸಾಮರ್ಥ್ಯಕ್ಕೆ ತಕ್ಕ ಹಾಗೆ ಬೆಳೆಸಿಕೊಂಡನೆಂದು ಸೂಚಿಸುತ್ತದೆ.

## "ಕೆಂಡಗಳ"

ಇದು ಕುರುಡಾಗಿರುವ ಈ ಲೋಕವು ದೇವರ ಕಾರ್ಯಗಳಲ್ಲಿ ಹಿಂಸೆಕೊಡುತ್ತಿರುವ ವೈರಿಗಳ ಪ್ರಭಾವವನ್ನು ಸೂಚಿಸುತ್ತದೆ!

ಇದು ಯೇಸು ದೇವರ ಚಿತ್ತವನ್ನು ಮಾಡಿದ್ದರಿಂದ ವಿರೋಧಗಳು ಮತ್ತು ಪ್ರಭಾವಗಳು ಸ್ವಯಂಪ್ರೇರಿತವಾಗಿ ತನ್ನ ಮೇಲೆ ಬಂತು ಎಂದು ಸೂಚಿಸುತ್ತದೆ.

ಹೌದು! ಹೇಗೆ ಆರೋನನು ವೇದಿಯಿಂದ ಕೆಂಡಗಳನ್ನು ತೆಗೆದುಕೊಂಡಂತೆಯೇ ಹಾಗೆಯೇ ಯೇಸು ಸಹ..... ದೇವರ ಚಿತ್ತವನ್ನು ಮಾಡಲು ಸ್ವಯಂಪ್ರೇರಿತವಾಗಿ ಅಂಗೀಕರಿಸಿಕೊಂಡು ತನ್ನನ್ನೇ ಆ ವಿರೋಧಗಳಿಗೆ ಒಪ್ಪಿಸಿಕೊಟ್ಟನು.

ನಂತರ ನಾವು ಏನು ಓದುತ್ತೇವೆ.....

## "ಆ ಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು"

ಇಲ್ಲಿ ರಕ್ತವು ಜೀವವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯಾಜಕಕಾಂಡ 17:11** – "ರಕ್ತವು ಪ್ರಾಣಾಧಾರವಾಗಿರುವ ಕಾರಣ."

ಇದು ನಮಗೆ ಗೊತ್ತಿರುವಹಾಗೆ ವೈಜ್ಞಾನಿಕವಾಗಿ ಕಣಗಳು ( **haemoglobin** ) ದೇಹದ ಎಲ್ಲಾ ಭಾಗಗಳಿಗೆ ರಕ್ತಕೋಶಗಳಲ್ಲಿ ಪ್ರಾಣವಾಯುವನ್ನು ಕೊಂಡೊಯ್ಯುತ್ತದೆ.

ಆದ್ದರಿಂದ ಈ "ಹೋರಿಯ ರಕ್ತವು" ಬಲಿಯಾಗಿ ಅರ್ಪಿಸಿದ ಯೇಸುವಿನ ಶಾರೀರಿಕ ಜೀವನವನ್ನು ಸೂಚಿಸುತ್ತದೆ ಮತ್ತು ಆತನು ದೇವರ ಚಿತ್ತವನ್ನು ನೆರವೇರಿಸಲು ಪ್ರತಿಷ್ಠಿಸಿಕೊಂಡಿದ್ದಾನೆ.

**ಈ "ರಕ್ತ"ವನ್ನು ಆರೋನನು "ಪರಿಶುದ್ಧ" ಸ್ಥಳಕ್ಕೆ ಕೊಂಡೊಯ್ಯದನು**

**ಇದರ ಅರ್ಥವೇನು?**

## "ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸಿ"

ಇದು ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ನಂತರ ತಾನು ಕಳೆದ ಜೀವನವನ್ನು ಸೂಚಿಸುತ್ತದೆ.

.......ಪ್ರತಿಷ್ಠೆಮಾಡಿದ ಮತ್ತು ಬಲಿದಾನ ಮಾಡಿದ ಜೀವನ!!

ಆದ್ದರಿಂದ ಯೋರ್ದಾನ್ ನದಿಯಲ್ಲಿ ದೀಕ್ಷಾಸ್ನಾನ ಮಾಡುವಾಗ ಯೇಸು ಮಾಡಿದ ಯಜ್ಞದ ಬಲಿಯನ್ನು ಕುರಿತು ವಿವರವಾಗಿ ನಾವು ನೋಡಿದೆವು.

**ಈಗ ಪವಿತ್ರ ಸ್ಥಳಕ್ಕೆ ಹೋಗುವ ಆರೋನನನ್ನು ಹಿಂಬಾಲಿಸೋಣ.....**

ಹೌದು, ಪವಿತ್ರ ಸ್ಥಳದೊಳಗೆ ಹೋಗಿದ ಮೇಲೆ...... ಅಲ್ಲೇ ಆರೋನನು ಸ್ವಲ್ಪ ಸಮಯ ಕಳೆಯುವದನ್ನು ನೋಡುತ್ತೇವೆ.

ಆ ಕಾಲವನ್ನು ನಮ್ಮ ಕರ್ತನು ಮಾಡುವ ದೇವರ ಸೇವೆಯನ್ನು ಸೂಚಿಸುತ್ತದೆ – ......... 3 ½ ವರ್ಷಗಳ ಕಾಲವೆಂದು ದಾನಿಯೇಲನು 9:27ರಲ್ಲಿ ನೋಡುತ್ತೇವೆ ಮತ್ತು ಇದು "ಎಪ್ಪತ್ತನೆಯ ವಾರ"ದ ಪ್ರವಾದಿಯಾಗಿದೆ.

ಯೇಸುವಿನ ಈ ಸೇವೆ ಮತ್ತು ಆತನ ಅನುಭವಗಳು ಆರೋನನು ಪವಿತ್ರ ಸ್ಥಳದಲ್ಲಿ ಏನುಮಾಡುತ್ತಾನೋ ಅದು ಛಾಯೆಯಾಗಿದೆ.

## ಈಗ ಇವುಗಳ ಅರ್ಥಗಳನ್ನು ನೋಡೋಣ -

“ಆರೋನನು ಪರಿಮಳಧೂಪದ್ರವ್ಯದ ಚೂರ್ಣವನ್ನು ಕೆಂಡದಲ್ಲಿ ಹಾಕಬೇಕು” ಇದು ಯೇಸು ತನ್ನ 3 ½ ವರ್ಷದ ಸೇವೆಯಲ್ಲಿ ಯೆಹೂದ್ಯರಿಂದ ಹೊಂದುವ ಅವಮಾನ ಮತ್ತು ಹೊರಟಾದ ಮಾತುಗಳು ಮತ್ತು ಹಿಂಸೆಗಳಿಗೆ ತನ್ನನ್ನು ಸ್ವಯಂಪ್ರೇರಿತವಾಗಿ ಒಪ್ಪಿಸಿಕೊಡುವದನ್ನು ಸೂಚಿಸುತ್ತದೆ.



ಇಲ್ಲಿ ಯೆಹೂದ್ಯರು ಅಂದರೆ ಫರಿಸಾಯರು, ಸದ್ದುಕಾಯರು ಮತ್ತು ನ್ಯಾಯ ಬೋಧಕರೇ ಆತನಲ್ಲಿ ತಪ್ಪು ಕಂಡು ಹಿಡಿಯಲು ಮತ್ತು ಅದು ಮಾತ್ರವಲ್ಲದೆ ಅನೇಕ ಸಾರಿ ಆತನನ್ನು ಕೊಲ್ಲಲು ಸಹ ಯೋಜನೆ ಮಾಡುತ್ತಾರೆ.

(ಉದಾ: **ಲೂಕ 6:11/4:29**)

ಈಗ ಈ "ಪರಿಮಳಧೂಪದ್ರವ್ಯದ ಚೂರ್ಣವನ್ನು ಕೆಂಡದಲ್ಲಿ ಹಾಕುವದು" ಎಂದರೆ ಪ್ರತಿದಿನ ಈ ವಿರೋಧ ಮತ್ತು ಹಿಂಸೆಗಳನ್ನು "ಸಂಧಿಸುವಾಗ" ಇದ್ದ ಯೇಸುವಿನ ಗುಣಲಕ್ಷಣವನ್ನು ಸೂಚಿಸುತ್ತದೆ.

ಈಗ ನಾವು ಈ "ಪರಿಮಳಧೂಪದ್ರವ್ಯದ ಚೂರ್ಣವನ್ನು ಕೆಂಡದಲ್ಲಿ ಹಾಕು"ವದರಿಂದ ಏನು ವ್ಯಕ್ತವಾಗುತ್ತದೆ ಎಂದು ಓದೋಣ.......

## "ಧೂಪದ ಹೊಗೆ ಮೇಘದೋಪಾದಿಯಲ್ಲಿ"

ಇದು ಈ ಎಲ್ಲಾ ಅನುಭವಗಳ ಮೂಲಕ ಯೇಸುವಿನಿಂದ ಏನು ವ್ಯಕ್ತವಾಯಿತು ಎಂದು ನೋಡುತ್ತೇವೆ – ಅದೇನೆಂದರೆ ದೇವರಿಗೆ ಆತನ ವಿಧೇಯತೆ

....... ಮತ್ತು ಇತರ ಮಹಿಮೆಯುಳ್ಳ ಗುಣಲಕ್ಷಣಗಳೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಎಫೆಸದವರಿಗೆ 5:2**

**"ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ......."**

ಹೌದು! ಯೇಸುವಿನ ಯಜ್ಞವು ಇಲ್ಲಿ ಸುಗಂಧವಾಸನೆಗೆ ಸೂಚಿತವಾಗಿದೆ!!

ಈಗ "ಪರಿಮಳಧೂಪದ್ರವ್ಯದ ಚೂರ್ಣವನ್ನು ಕೆಂಡದಲ್ಲಿ ಹಾಕುವದು" ಬೇರೆ ಏನನ್ನು ವ್ಯಕ್ತಪಡಿಸುತ್ತದೆ ಎಂದು ನೋಡೋಣ.

## "ಧೂಪದ ಹೊಗೆ ಮೇಘದೋಪಾದಿಯಲ್ಲಿ"

### ಇದರ ಅರ್ಥವೇನು?

ಇದು "ಧೂಪವು" ಹೊತ್ತಿಉರಿದಾಗ ಬರುವ ಹೊಗೆಯಾಗಿದೆ.

ಹೇಗೆ ಬೆಂಕಿ ಉರಿದಾಗ ಹೊಗೆಯು ಬರುತ್ತದೋ......

ಹಾಗೆಯೇ ಈ "ಹೊಗೆಯು" ಅಗ್ನಿಮಯವಾದ ಅನುಭವಗಳ ಮಧ್ಯದಲ್ಲಿ ಯೇಸುವಿನಲ್ಲಿ ವ್ಯಕ್ತವಾದದನ್ನು ಸೂಚಿಸುತ್ತದೆ.

ಇದು ಯೇಸುವಿನ **3 1/2** ವರ್ಷದ ಸೇವೆಯ ಪ್ರತಿದಿನ ಜೀವಿತದಲ್ಲಿ ವ್ಯಕ್ತವಾದ ಮೊತ್ತ ಕ್ರಿಯೆಗಳನ್ನು ಸೂಚಿಸುತ್ತದೆ.

ಅದುವೇ....... ಆತನ "ಜೀವನದ ಹಾದಿ(ನಡೆ)"

ಈಗ ಮುಂದಿನ ವಿಷಯಕ್ಕೆ ಬರೋಣ........

### "ಧೂಪದ ಹೊಗೆ ಮೇಘದೋಪಾದಿಯಲ್ಲಿ ಆಜ್ಞಾಶಾಸನಗಳ ಮೇಲಣ ಕೃಪಾಸನವನ್ನು ಮುಚ್ಚುವದು."

### ಇದು ಏನ್ನನ್ನು ಸೂಚಿಸುತ್ತದೆ?

ನಮಗೆ ಮೊದಲೇ ಗೊತ್ತಿರುವ ಹಾಗೆ "ಒಡಂಬಡಿಕೆ ಪೆಟ್ಟಿಗೆ"ಯು ಮಹಾ ಪವಿತ್ರ ಸ್ಥಾನದಲ್ಲಿದೆ ಮತ್ತು ಇದು ದೇವರು ಮತ್ತು ಪರಲೋಕವನ್ನು ಸೂಚಿಸುತ್ತದೆ!!

ಆದ್ದರಿಂದ ಇಲ್ಲಿ ಕಣ್ಣಿಗೆ ಕಾಣುವ ಹೊಗೆಯ ದೈವೀಕ ದೃಷ್ಟಿಯಲ್ಲಿ ಯೇಸುವಿನ ಯಜ್ಞಬಲಿ ಮತ್ತು ಜೀವಿತವನ್ನು ಸೂಚಿಸುತ್ತದೆ.

## "ಆಜ್ಞಾಶಾಸನಗಳ ಮೇಲಣ ಕೃಪಾಸನವನ್ನು ಮುಚ್ಚುವದು."

ನಾವು ಕಳೆದ ಅಭ್ಯಾಸದಲ್ಲಿ **(31)** ಗುಡಾರ ಮತ್ತು ಅದರ ಪ್ರಾಮುಖ್ಯತೆಯನ್ನು ಕುರಿತು ನೋಡಿದ್ದೇನೆಂದರೆ "ಕೃಪಾಸನವು"

ದೇವರ ನ್ಯಾಯತೀರ್ಪಿನ ಗುಣಲಕ್ಷಣವನ್ನು ಸೂಚಿಸುತ್ತದೆ.

**ಹೌದು! ದೈವೀಕ ನ್ಯಾಯತೀರ್ಪು!!**

ಹಾಗಾದರೆ ಈ "ಕೃಪಾಸನದ" ಮೇಲೆ "ಹೊಗೆಯು" ಮೇಘದೋಪಾದಿಯಲ್ಲಿ ಮುಚ್ಚುವದು ಏನ್ನನ್ನು ಸೂಚಿಸುತ್ತದೆ?

ಇದನ್ನು ಅರ್ಥಮಾಡಿಕೊಳ್ಳಲು ಕೆಳಗಿನ ವಾಕ್ಯವನ್ನು ಓದೋಣ –

**ಗಲಾತ್ಯ 4:4**

**"ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು,... ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು."**

ಹೌದು! ಯೇಸು ಒಬ್ಬ ಯೆಹೂದ್ಯನಾಗಿ ಹುಟ್ಟಿದನು ಮತ್ತು ಧರ್ಮಶಾಸ್ತ್ರವನ್ನು ಅನುಸರಿಸುವದರಲ್ಲಿ ಪರಿಪೂರ್ಣವಾಗಿ ವಿಧೇಯನಾಗಿದ್ದನು.

ಇದು ಎಂತಹ ಗಂಭೀರವಾದ ವಿಚಾರವೆಂದರೆ ಮಹಾ ಯಾಜಕನಾದ ಆರೋನನ್ನು ಕುರಿತು ನಾವು ಹೀಗೆ ಓದುತ್ತೇವೆ –

**“ಅವನಿಗೆ ಪ್ರಾಣನಷ್ಟವಾಗದಂತೆ ಧೂಪದ ಹೊಗೆ ಮೇಘದೋಪಾದಿಯಲ್ಲಿ ಆಜ್ಞಾಶಾಸನಗಳ ಮೇಲಣ ಕೃಪಾಸನವನ್ನು ಮುಚ್ಚುವದು.”**

ಓಹ್, ಹೌದು! ಇದು ಯೇಸುವಿಗೆ ನಿತ್ಯಜೀವ ಅಥವಾ..... ನಿತ್ಯಮರಣ ತರುವಂತಹ ವಿಚಾರವಾಗಿತ್ತು ಏಕೆಂದರೆ ಆತನೊಬ್ಬ ಪರಿಪೂರ್ಣ ಮನುಷ್ಯನಾಗಿದ್ದನು.

ಮತ್ತು, ಹೌದು! ಈ "ಕೃಪಾಸನವನ್ನು" ಮುಚ್ಚುವದು ಅಂದರೆ ಹೇಗೆ ಯೇಸು ತನ್ನ 3 ½ ವರ್ಷದ ಜೀವನದ ಹಾದಿ(ನಡೆ)ಯನ್ನು ಧರ್ಮಶಾಸ್ತ್ರದ ಚಿಕ್ಕ ಚಿಕ್ಕ ವಿಷಯವನ್ನು ಕೂಡ ಪೂರ್ಣವಾಗಿ ಕೈಕೊಂಡು ದೇವರ ನ್ಯಾಯ(ತೀರ್ಪನ್ನು)ವನ್ನು ಪರಿಪೂರ್ಣವಾಗಿ ನೆರವೇರಿಸಿದನು!

ಹೌದು! "ಹೊಗೆ"ಯು "ಕೃಪಾಸನವನ್ನು" ಮುಚ್ಚುವದು ಎಂಬುದು

........ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಂಡಿರುವದಕ್ಕೆ ಸೂಚಿತವಾಗಿದೆ.

**ಹೌದು! ಆರೋನನು "ಮಹಾ ಪವಿತ್ರ ಸ್ಥಾನ"ದೊಳಗೆ ಪ್ರವೇಶಿಸಿದಾಗ ಆತನ ಕೈಯಲ್ಲಿ "ಹೋರಿಯ ರಕ್ತ ಮಾತ್ರವಿತ್ತು."**

ಆರೋನನು ಮಹಾ ಪವಿತ್ರಸ್ಥಾನದೊಳಗೆ ಪರದೆಯ ಮೂಲಕ ಹೋಗಲು ಸ್ವಲ್ಪ ಸಮಯ ತೆಗೆದುಕೊಂಡಿತು. ಏಕೆಂದರೆ ಆ "ಪರದೆ"ಯು ಭಾರವಾಗಿತ್ತು.

ಆ ಪರದೆಯ ಬಹಳ ಭಾರ ಮತ್ತು ದಪ್ಪಗೆ ಇದ್ದರಿಂದ ಆತನು ನಿಧಾನವಾಗಿ ಆ ಪರದೆಯ ಕೆಳಗಿನಿಂದ ತೆವಳಿಕೊಂಡು ಹೋಗ ಬೇಕಾಯಿತು ಮತ್ತು ಆ ಪರದೆಯನ್ನು ಭಾರವಾಗಿದ್ದರಿಂದ ಕೈಯಲ್ಲಿ ಎತ್ತಲು ಆಗುತ್ತಿರಲಿಲ್ಲ.

ಮಹಾಯಾಜಕನು ಅದರ ಕೆಳಗಿನಿಂದ ತೆವಳಿಕೊಂಡು ಹೋಗಬೇಕಾಯಿತು!!

## ಇವೆಲ್ಲವನ್ನು ಮಾಡುವದಕ್ಕೆ ಸ್ವಲ್ಪ ಸಮಯ ಬೇಕಾಗಿತ್ತು!

### ಇವೆಲ್ಲವು ಏನ್ನನ್ನು ಸೂಚಿಸುತ್ತದೆ?

ಇದು ಯೇಸು ಆತನ ಮರಣದ ಸಮಯದಲ್ಲಿ ಈ ಭೂಮಿಯ ಶಾರೀರಿಕ ಸ್ಥಿತಿಯಿಂದ ಮುಂದೆ ಹೋಗಿ ಪರಲೋಕದಲ್ಲಿ ತಂದೆಯಾದ ದೇವರ ಸನ್ನಿಧಿಯಲ್ಲಿ ಸೇರುವವರೆಗೂ ತೆಗೆದುಕೊಂಡ ಸಮಯವನ್ನು ಸೂಚಿಸುತ್ತದೆ!

ಇವೆಲ್ಲವೂ ಆತನು 3 ದಿವಸಗಳ ಕಾಲ ಕುಳಿಯಲ್ಲಿ ಮತ್ತು......... 40 ದಿವಸಗಳು ಆತನ ಅಪ್ಪೋಸ್ತಲರು ಮತ್ತು ಶಿಶ್ಯರೊಂದಿಗೆ ಈ ಭೂಮಿಯಲ್ಲಿ ಆತ್ಮೀಕ ಶರೀರದಲ್ಲಿದ್ದಾಗ ಆಯಿತು! (1 **ಪೇತ್ರ** 3:18)

ಈ ವಿಷಯವು ಯೇಸು ತನ್ನ ಸ್ವಂತ ವಾಕ್ಯಗಳಿಂದ ಮಗ್ದಲದ ಮರಿಯಳಿಗೆ ಆತನು ಪುನರುತ್ಥಾನ ಹೊಂದಿದ ನಂತರ ಹೇಳಿರುವದರಿಂದ ನಮಗೆ ಕೆಳಗಿನ ವಾಕ್ಯದಿಂದ ಸ್ಪಷ್ಟವಾಗುತ್ತದೆ – **ಯೋಹಾನ 20:17**

**“ಯಾಕೆಂದರೆ ನಾನು ಇನ್ನೂ ತಂದೆಯ ಬಳಗೆ ಏರಿಹೋದವನಲ್ಲ."**

ಆರೋನನ ಕೈಯಲ್ಲಿರುವ "ಹೋರಿಯ ರಕ್ತವು" ಯೇಸುವಿನ ಪರಿಪೂರ್ಣ ಮಾನವ ಜೀವನದ ಮೌಲ್ಯವನ್ನು ಸೂಚಿಸುತ್ತದೆ.

ಹೌದು! ಯೇಸು ಈಗ ಸ್ವತಃ ಪರಲೋಕದಳೊಗೆ ಪ್ರವೇಶಿಸಿದ್ದಾನೆ–

.....ಇದು "ಮಹಾಪವಿತ್ರಸ್ಥಾನ"ವೆಂಬ ಛಾಯೆಗೆ ನಿಜಾಂಶವಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ –

## ಇಬ್ರಿಯರಿಗೆ 9:24

**"ಯಾಕೆಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟಿದ್ದಾಗಿಯೂ ಇರುವ ಆಲಯದಲ್ಲಿ ಪ್ರವೇಶಿಸದೆ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು."**

ಈಗ ಯೇಸು ಪರಲೋಕಕ್ಕೆ "ಏರಿ ಹೋದ" ಮೇಲೆ ಏನು ಮಾಡಿದನು ಮತ್ತು ಏನ್ನನ್ನು ಸಮರ್ಪಿಸಿದನು..... ಆತನು ಪುನರುತ್ಥಾನ ಹೊಂದಿ ನಲವತ್ತು **(40)** ದಿವಸಗಳ ನಂತರ?

**ಇದನ್ನು ನಾವು ಆರೋನನು "ಮಹಾ ಪವಿತ್ರ" ಸ್ಥಾನದಲ್ಲಿ ಏನು ಮಾಡಿದನೆಂದು ನೋಡಿದಾಗ ಅದು ಏನ್ನನ್ನು ಸೂಚಿಸುತ್ತದೆ ಎಂದು ನಮಗೆ ಗೊತ್ತಾಗುತ್ತದೆ!!**

ಈ ವಿಷಯವನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದೋಣ –

**"ಆಗ ಆ ಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ....... ಮೇಲೆ ಚಿಮಿಕಿಸಬೇಕು."**



ನಾವು ಮೊದಲೇ ನೋಡಿದಂತೆ, ಈ "ಕೃಪಾಸನವು" ದೇವರ ನ್ಯಾಯತೀರ್ಪಿನ ಗುಣಲಕ್ಷನವನ್ನು ಸೂಚಿಸುತ್ತದೆ.

ಮತ್ತು "ರಕ್ತದಲ್ಲಿ ಸ್ವಲ್ಪವನ್ನು ಚಿಮಿಕಿಸುವದು" ಎಂದರೆ ಹೇಗೆ ಯೇಸುವಿನ ರಕ್ತವು ಅಥವಾ ಜೀವವು ದೈವೀಕ ನ್ಯಾಯ ತೀರ್ಪಿಗೆ ಸಮರ್ಪಕ (ಸಮಾಧಾನಕರ) ವಾಯಿತು ಎಂದು ಸೂಚಿಸುತ್ತದೆ –

**".........ಜೀವಕ್ಕೆ ಜೀವ**
**(ವಿಮೋಚನಕಾಂಡ 21:23)**

ಈಗ ಆರೋನನು ಆ "ಹೋರಿಯ ರಕ್ತವನ್ನು" ಯಾರಿಗೋಸ್ಕರ ಸಮರ್ಪಿಸಿದನು ಮತ್ತು ಅದು ಏನ್ನನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದೋಣ –

## ಯಾಜಕಕಾಂಡ 16:6

**"..........ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ"**

### ಇದಕ್ಕೆ ಅರ್ಥವೇನು?

ಈಗ ಆರೋನನು ಯಾರಿಗೆ ಛಾಯೆಯಾಗಿದ್ದಾನೆ ಮತ್ತು "ಹೋರಿ"ಯು ಯಾರಿಗೆ ಛಾಯೆಯಾಗಿದೆ ಎಂದು ನಾವು ಕಂಡು ಹಿಡಿದಿದ್ದೇವೆ!!

ಹೌದು! ನಮ್ಮ ಕರ್ತನಾದ ಯೇಸು ಪ್ರತಿರೂಪವಾದ ಮಹಾಯಾಜಕನು....... ಮತ್ತು "ಹೋರಿಯ ರಕ್ತ"ವು ಆತನ ಮಾನವ ಜೀವನದ ಹಕ್ಕುಗಳು ಅಥವಾ..... ಆತನ ಮೌಲ್ಯದ (ಅರ್ಹತೆಯ) ಛಾಯೆಯಾಗಿದೆ.

ನಮಗೆ ಆಶ್ಚರ್ಯವಾಗುವದೇನೆಂದರೆ –

.......ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ......ಎಂದರೆ ಏನು ಅರ್ಥ ಮತ್ತು ಇದು ಏನ್ನನ್ನು ಸೂಚಿಸುತ್ತದೆ?!

ಆತನು ಪಾಪಿಯಾಗಿದ್ದು "ತನಗೋಸ್ಕರ" ಪಾಪನಿವಾರನಾ ಬಲಿಯನ್ನು ಸಮರ್ಪಿಸಬೇಕಾಗಿತ್ತೆ?

**ನಿಶ್ಚಯವಾಗಿಯೂ ಇಲ್ಲ!**

ಯೇಸು ಒಬ್ಬ ಪಾಪಿಯಾಗಿರಲಿಲ್ಲ– ಆತನು ಪಾಪವಿಲ್ಲದವನಾಗಿದ್ದನು ........."ಆತನು ಕಳಂಕ ಅಥವಾ ಸುಕ್ಕು ಇಲ್ಲದವನಾಗಿದ್ದನು" !!

**ಹಾಗಾದರೆ....... 'ತನಗೋಸ್ಕರವೂ' ಎಂದರೆ..... ಏನ್ನನ್ನು ಸೂಚಿಸುತ್ತದೆ??**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## 1 ಕೊರಿಂಥದವರಿಗೆ 12:12

**"ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೋ, ಹಾಗೆಯೇ ಕ್ರಿಸ್ತನು."**

**ಹೌದು! ಇಲ್ಲದೆ ಇದಕ್ಕೆ ಉತ್ತರ!**

"ತನಗೋಸ್ಕರ" ಎಂದರೆ ಆತನ "ಶರೀರ"ದ "ಅಂಗಗಳನ್ನು" ಸೂಚಿಸುತ್ತದೆ, ಅವರು "ಆತನಲ್ಲಿದ್ದು" ಆತನನ್ನು ಹಿಂಬಾಲಿಸಿ, ಕರ್ತನು ಮಾಡಿದಂತಹ ಅದೇ "ಯಜ್ಞದ ಮೂಲದ ಒಡಂಬಡಿಕೆ"ಯನ್ನು ಮಾಡಿರುತ್ತಾರೆ. ಆದರೆ ಒಂದೇ ಒಂದು ದೊಡ್ಡ ವ್ಯತ್ಯಾಸ

ಏನೆಂದರೆ ಅವರು ಪರಿಪೂರ್ಣವಲ್ಲದವರು ಮತ್ತು ಪಾಪಿಗಳಾಗಿದ್ದಾರೆ!

**ಹೌದು! ಅವರೆಲ್ಲರೂ ಪಾಪಿಗಳಾಗಿದ್ದಾರೆ ಮತ್ತು ಪಾಪನಿವಾರಣೆಯ ಅವಶ್ಯವಿದೆ!!**

ಆದ್ದರಿಂದಲೇ ಯೇಸು ಪ್ರಾರ್ಥನೆ ಮಾಡುವಾಗ ತಾನು ತನ್ನನ್ನು ಎಂದು ಹೇಳುವದನ್ನು ಯೋಹಾನ 17ನೇ ಅಧ್ಯಾಯದಲ್ಲಿ ದಾಖಲಾಗಿರುವದನ್ನು ನೋಡುತ್ತೇವೆ –

**ಯೋಹಾನ 17:19**

**"ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ."**

**ಇದನ್ನು ನೀವು ನೋಡಿದಿರಾ?!**

ಆದ್ದರಿಂದ "ತನಗಾಗಿ" ಎಂದು ಹೇಳಿದ ಪಾಪನಿವಾರಣಾ ಬಲಿಯು ಕ್ರಿಸ್ತನ ಶರೀರದ ಅಂಗಗಳನ್ನು ಸೂಚಿಸುತ್ತದೆ.

ಮತ್ತು "......ತನ್ನ ಮನೆತನದವರಿಗೋಸ್ಕರ" ಎಂದರೆ ನಂಬಿಕೆಯ ಮನೆತನದವರು....... ಯಾರ್ಯಾರು ನಂಬತ್ತಾರೋ ಅಥವಾ ಯೇಸುವಿನ ಮೇಲೆ ನಂಬಿಕೆಯನ್ನು ಅಭ್ಯಾಸಿಸುತ್ತಾರೋ ಅಂಥವರನ್ನು ಸೂಚಿಸುತ್ತದೆ!

ನಾವು ಇನ್ನೂ ಹೇಳಬೇಕಾದರೆ "ತನಗಾಗಿ" ಎಂದರೆ

**.......ಕ್ರೈಸ್ತರ ಆರಿಸಲ್ಪಟ್ಟ ವರ್ಗದವರನ್ನು ಸೂಚಿಸುತ್ತದೆ.**

ಮತ್ತು "ಆತನ ಮನೆತನದವರು" ಎಂದರೆ

**........ಸಭೆಯಲ್ಲಿರುವ ಕ್ರೈಸ್ತರ "ಕರೆಯಲ್ಪಟ್ಟ" ವರ್ಗದವರನ್ನು ಸೂಚಿಸುತ್ತದೆ.**

ಈಗ ಈ "ರಕ್ತ"ವನ್ನು ಚಿಮಿಕಿಸುವದು ಎಂದರೆ ಪಾಪಗಳನ್ನು ಮುಚ್ಚುವದು ಅಥವಾ...... ಯಾರ್ಯಾರು, "ನಂಬುತ್ತಾರೋ" ಅವರೆಲ್ಲರು ಪಾಪಪರಿಹಾರವನ್ನು ಹೊಂದುತ್ತಾರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೊಸ್ತಲರ ಕೃತ್ಯಗಳು 10:43**

**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು........"**

**ಈಗ ಕೊನೆಯದಾಗಿ ಆ ಕೃಪಾಸನದ ಮೇಲೆ "ರಕ್ತ"ವನ್ನು ಚಿಮಿಕಿಸುವ ವಿಧಾನವನ್ನು ಕೆಳಗಿನ ವಾಕ್ಯದಲ್ಲಿ ಓದೋಣ -**

## ಯಾಜಕಕಾಂಡ 16:14

**"ಆಗ ಆ ಹೋರಿಯ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವಭಾಗದ ಮೇಲೆ ಬೆರಳಿನಿಂದ ಚಿಮಿಕಿಸಿ ಕೃಪಾಸನದ ಎದುರಾಗಿಯೂ ಏಳು ಸಾರಿ ಚಿಮಿಕಿಸಬೇಕು."**

ಹೌದು! "ಶಿಲುಬೆಯ" ಆಕಾರದಲ್ಲಿ "ಚಿಮಿಕಿಸು"ವದನ್ನು ಮಾಡಬೇಕಾಗಿತ್ತು ಮತ್ತು ಇದನ್ನು "ಏಳುಸಾರಿ" ಮಾಡಬೇಕಾಗಿತ್ತು.

**ಇವುಗಳ ಅರ್ಥವೇನು ಮತ್ತು ಇವು ಏನ್ನನ್ನು ಸೂಚಿಸುತ್ತದೆ?**



"ಶಿಲುಬೆಯ" ಆಕಾರದಲ್ಲಿ "ರಕ್ತ"ವನ್ನು ಚಿಮಿಕಿಸುವದು ಎಂದರೆ ಈಗ ಮಾತ್ರಕ್ಕೆ ಕ್ರೈಸ್ತರು ಕೆಲವು ಮೂಲತತ್ವ ಮತ್ತು ನಿಬಂಧನೆಯ ಮೇಲೆ ನೀತಿವಂತರಾಗುತ್ತಾರೆಂದು ಸೂಚಿಸುತ್ತದೆ.......

ಮತ್ತು ಒಂದೇ ಒಂದು ಉದ್ದೇಶವೇನೆಂದರೆ ವಿಶ್ವಾಸಿಗಳು ಅಂದರೆ ನಂಬುವವರು ಯಜಮಾನನ ಹೆಜ್ಜೆಜಾಡನ್ನು ಹಿಂಭಾಲಿಸುವ ಹಿಂಭಾಲಕರಾಗಿಯೂ ಮತ್ತು "ಶಿಲುಬೆಯನ್ನು ಹೊತ್ತುಕೊಂಡವರೂ"

ಆಗಬೇಕು! ಬರೀ "ವಿಶ್ವಾಸಿ"ಗಳಾಗಿ ಉಳಿದು ಅವರು ಹಿಂಭಾಲಕರಾಗದೆ ಹೋದರೆ ಅವರಿಗೆ ಈ "ನೀತಿವಂತ"ರಾಗುವಿಕೆಯಿಂದ ನಷ್ಟವುಂಟಾಗಿ ನಿಧಾನವಾಗಿ ಅವರು ಆತ್ಮೀಕ ದೃಷ್ಟಿಯನ್ನು ಕಳೆದುಕೊಂಡು ಮತ್ತೆ ಲೌಕಿಕದವರಾಗುವರು!!

ಹೌದು! "ವಿಶ್ವಾಸಿ"ಗಳಾಗಿ ಹೊಂದುವ ನೀತಿವಂತಿಕೆಯು ಅಲ್ಪಕಾಲಿಕವಾದದ್ದು (ಖಾತರಿಯಾಗಿರುವದಿಲ್ಲ)

..........ಮತ್ತು ಅದಕ್ಕೆ ಜೀವಕಳೆ ತುಂಬಬೇಕು ಅಥವಾ ಖಾತರಿಪಡಿಸಬೇಕೆಂದರೆ ಕೆಲವು ವಿಧಿ-ವಿಧಾನವನ್ನು ಒಳಗೊಂಡಿದೆ.

ಆದ್ದರಿಂದ "ಶಿಲುಬೆ"ಯ ಆಕಾರದಲ್ಲಿ ಚಿಮಿಕಿಸುವದು ನಮಗೆ ಏನ್ನನ್ನು ಬೋಧಿಸುತ್ತದೆ ಅಂದರೆ ಶಾಶ್ವತವಾದ ನೀತಿವಂತಿಕೆಯನ್ನು ನಮ್ಮ ಕರ್ತನು ಈಗ ಮಾತ್ರ ಆತನ ಹಿಂಭಾಲಕರು ತಮ್ಮ "ಶರೀರ"ಗಳನ್ನು (ಅವರ ಮಾನವ ಜೀವಿತ ಮತ್ತು ಚಿತ್ತ)

**".......ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸುತ್ತಾರೋ" ರೋಮಾಪುರದವರಿಗೆ 12:1** ಅಂಥವರಿಗೆ ಕೊಡುವನು.

ಹೌದು! ದೇವರಿಗೆ ಅರ್ಪಿಸುವ ಯಜ್ಞವು "ಪರಿಶುದ್ಧ"ವಾಗಿರಬೇಕು ಮತ್ತು ಅದು ಯೇಸುವಿನ ರಕ್ತದಲ್ಲಿ ಮಾತ್ರ ಸಾಧ್ಯವಾಗುತ್ತದೆ ಮತ್ತು ಆ ರಕ್ತದಲ್ಲಿ ಮಾತ್ರ ಪಾಪದಿಂದ ಶುದ್ಧವಾಗುತ್ತದೆ ಮತ್ತು ವಿಮೋಚನೆಯುಂಟಾಗುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ವಿಷಯವೇನೆಂದರೆ, ಮೌಲ್ಯವುಳ್ಳ (ಅರ್ಹತೆಯುಳ್ಳ) ಯೇಸುವಿನ ಯಜ್ಞಬಲಿ ಮತ್ತು ಆತನ "ರಕ್ತ"ವನ್ನು ಚಿಮಿಕಿಸುವದು ಕೊನೆಯದಾಗಿ ಮತ್ತು ಶಾಶ್ವತವಾಗಿ ಆತನ ಹಿಂಭಾಲಕರು ಅಥವಾ ಶರೀರದ ಅಂಗಗಳಿಗೆ ಮಾತ್ರವೆಂದು ನಾವು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## ಯಾಜಕಕಾಂಡ 16:11

**"ಆರೋನನು ತನಗೋಸ್ಕರವಾದ ದೋಷಪರಿಹಾರಕಯಜ್ಞದ ಹೋರಿಯನ್ನು ಸಮರ್ಪಿಸಿ ತನಗೋಸ್ಕರವೂ ತನ್ನ ಮನೆತನದವರಿಗೋಸ್ಕರವೂ ದೋಷಪರಿಹಾರವನ್ನು ಮಾಡಬೇಕು."**

ಇಲ್ಲಿ "ತನಗೋಸ್ಕರವಾದ" ಎಂಬ ವಾಕ್ಯವನ್ನು ಮಾತ್ರ ಗಮನಿಸಿರಿ.
ಈ ವಾಕ್ಯವು ಆರಂಭದಲ್ಲಿಯೂ ಮತ್ತು ಕೊನೆಯಲ್ಲಿಯೂ ಬರುತ್ತದೆ.

ಇದು ರಕ್ತವನ್ನು ಸಮರ್ಪಿಸುವ ಉದ್ದೇಶ ಮತ್ತು ಸಭೆಯ ವರ್ಗದವರಿಗಾಗಿ ಶಾಶ್ವತವಾಗಿ ಮಾಡಲಾಯಿತು.

ಈಗ ಈ ರಕ್ತವನ್ನು ಏಳು ಸಾರಿ ಚಿಮಿಕಿಸುವದು ಎಂದರೆ ಏನ್ನನ್ನು ಸೂಚಿಸುತ್ತದೆ?

"ಏಳು ಸಾರಿ" ಚಿಮಿಕಿಸುವದು ಅಂದರೆ ಇಡೀ ಸುವಾರ್ತಾ ಯುಗದಲ್ಲಿ ಈ ಶಾಶ್ವತವಾದ ನೀತಿವಂತಿಕೆಯು ತನ್ನ ಹಿಂಬಾಲಕರಿಗೆ ದೊರೆಯುತ್ತದೆ.

.......ಇದರಲ್ಲಿ ಏಳು ವಿಭಾಗಗಳಿವೆ ಎಂದು ಪ್ರಕಟನೆ 2ನೇ ಮತ್ತು 3ನೇಯ ಅಧ್ಯಾಯಗಳಲ್ಲಿ ನೋಡುತ್ತೇವೆ.

(ಈ ಏಳು ಸಭೆಗಳ ವಿವರಗಳನ್ನು ಕುರಿತು ಅಭ್ಯಾಸ # 45ರಲ್ಲಿ ನೋಡಲಿದ್ದೇವೆ)

**ಆದ್ದರಿಂದ ದೋಷಪರಿಹಾರಕವಾದ ಮಹಾದಿನದಲ್ಲಿ "ಹೋರಿಯ" ಬಲಿಯ ಮಹಾ ಸೂಚಕಕಾರ್ಯವನ್ನು ಕುರಿತು ನೋಡಿದೆವು!**

ಈಗ ನಾವು ದೋಷಪರಿಹಾರಕದಿನದ ಎರಡನೆಯ ಬಲಿಯನ್ನು ಕುರಿತು ಪರೀಕ್ಷಿಸಿ ಅಭ್ಯಾಸಮಾಡೋಣ –

# ಎರಡು ಹೋತಗಳು

ಈಗ ಈ ಬಲಿಯ ವಿವರಗಳನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –



**ಯಾಜಕಕಾಂಡ 16:7-10**

“ಆ ಎರಡು ಹೋತಗಳನ್ನು ಅವನು ದೇವದರ್ಶನದ ಗುಡಾರದ ಬಾಗಿಲಲ್ಲಿಯೆಹೋವನ ಸನ್ನಿಧಿಯಲ್ಲಿ ನಿಲ್ಲಿಸಬೇಕು. ಆಗ ಅವನು ಆ ಹೋತಗಳ ವಿಷಯವಾಗಿ ಯೆಹೋವನಿಗೋಸ್ಕರವೆಂದೂ ಅಜಾಜೇಲನಿಗೋಸ್ಕರವೆಂದೂ ಚೀಟಿಗಳನ್ನು ಬರೆದುಹಾಕಬೇಕು. ಯಾವ ಹೋತ ಯೆಹೋವನದೆಂದು ಗೊತ್ತಾಗುವದೋ ಅದನ್ನು ಆರೋನನು ದೋಷಪರಿಹಾರಕ ಯಜ್ಞದೂಪವಾಗಿ ಸಮರ್ಪಿಸಬೇಕು. ಯಾವ ಹೋತ ಅಜಾಜೇಲನದೆಂದು ಗೊತ್ತಾಗುವದೋ ಅದನ್ನು ಯೆಹೋವನ ಸನ್ನಿಧಿಯಲ್ಲಿ ಸಜೀವವಾಗಿಯೇ ನಿಲ್ಲಿಸಿ ಅದರ ಮೇಲೆ ದೋಷದೊರಿಸಿ ಅರಣ್ಯಕ್ಕೆ ಆಜಾಜೇಲನಿಗಾಗಿ ಬಿಡಿಸಿಬಿಡಬೇಕು”



ಈ ಮೇಲಿನ ವಾಕ್ಯದಲ್ಲಿ ನಾವು ಏನು
ಓದುತ್ತೇವೆಂದರೆ –
ಮಹಾಯಾಜಕನಾದ ಆರೋನನು
**"ದೇವದರ್ಶನದ ಗುಡಾರದ ಬಾಗಲಲ್ಲಿ"**
ಯೆಹೋವನ ಮುಂದೆ ಆ ಎರಡು ಹೋತಗಳನ್ನು
ನಿಲ್ಲಿಸುವನು.

...ಆರೋನನು ಆ ಎರಡು ಹೋತಗಳಿಗಾಗಿ ಚೀಟುಗಳನ್ನು ಬರೆದುಹಾಕುತ್ತಾನೆ.

........ಒಂದು ಚೀಟು ಯೆಹೋವನಿಗೋಸ್ಕರವೆಂದು ಸಮರ್ಪಿಸಬೇಕಾದ ಹೋತವಾಗಿರುತ್ತದೆ.

.......ಮತ್ತು ಇನ್ನೊಂದು "ಅಜಾಜೇಲನ ಹೋತ"ವೆಂದು ಚೀಟು ಬೀಳುತ್ತದೆ.

ಯೆಹೋವನಿಗೋಸ್ಕರವಾದ ಹೋತವನ್ನು ಆರೋನನು ದೋಷಪರಿಹಾರಕ ಯಜ್ಞರೂಪವಾಗಿ ಸಮರ್ಪಿಸುತ್ತಾನೆ.

ಇನ್ನೊಂದು ಹೋತ ಅಜಾಜೇಲನಿಗೋಸ್ಕರವೆಂದು "ಚೀಟು" ಬಿದ್ದು ಅದನ್ನು ಯೆಹೋವನ ಸನ್ನಿಧಿಯಲ್ಲಿ ಸಜೀವವಾಗಿಯೇ ನಿಲ್ಲಿಸಿ ಅದರ ಮೇಲೆ ದೋಷಹೊರಿಸಿ ಅರಣ್ಯಕ್ಕೆ ಓಡಿಸಿಬಿಡುತ್ತಾನೆ.

ಈಗ! "ಯೆಹೋವನ ಹೋತ" ಮತ್ತು "ಅಜಾಜೇಲನ ಹೋತ"ವನ್ನು ದೋಷಪರಿಹಾರಕ ಯಜ್ಞಬಲಿಕೊಡುವ ವಿಧಾನವನ್ನು ವಿವರವಾಗಿ ಅಭ್ಯಾಸಮಾಡೋಣ ಮತ್ತು

**......ಅವುಗಳು ಏನ್ನನ್ನು ಸೂಚಿಸುತ್ತದೆ ಎಂದು ನೋಡೋಣ?**

## ಯೆಹೋವನ ಹೋತ

ಈಗ ನಾವು ಇದರ ವಿವರಗಳನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

## ಯಾಜಕಕಾಂಡ 16:15 16

**"ಜನರಿಗೋಸ್ಕರವಾದ ದೋಷಪರಿಹಾರಕ ಯಜಜ್ಞ ಹೋತವನ್ನು ವಧಿಸಿ ಅಧರ ರಕ್ತವನ್ನು ತೆರೆಯೊಳಗೆ ತಂದು ಹೋರಿಯ ರಕ್ತದಿಂದ ಮಾಡಿದಂತೆಯೇ ಇದರ ರಕ್ತದಿಂದಲೂ ಮಾಡಿ ಕೃಪಾಸನದ ಮೇಲೆಯೂ ಎದುರಾಗಿಯೂ ಚಿಮಿಕಿಸಬೇಕು. ಹೀಗೆ ಇಸ್ರಾಯೇಲ್ಯರು ನಾನಾ ವಿಧವಾದ ಅಪರಿಶುದ್ಧತ್ವ, ಅಪರಾಧ, ದ್ರೋಹ ಇವುಗಳಿಂದ ಮಹಾಪವಿತ್ರಸ್ಥಾನಕ್ಕೆ ಉಂಟುಮಾಡಿದ ದೋಷವನ್ನು ಆರೋನನು ಪರಿಹರಿಸುವನು. ಅಶುದ್ಧರಾದ ಅವರ ನಡುವೆ ಇರುವ ದೇವದರ್ಶನದ ಗುಡಾರಕ್ಕೋಸ್ಕರವೂ ಹಾಗೆಯೇ ದೋಷಪರಿಹಾರಮಾಡುವನು."**

ಈ ವಾಕ್ಯಗಳಲ್ಲಿ ನಾವು ಏನು ಓದುತ್ತೇವೆಂದರೆ –

.......ಆರೋನನು ಆ ಹೋತವನ್ನು ಗುಡಾರದ ಬಾಗಲಲ್ಲಿ ದೋಷಪರಿಹಾರಕ ಯಜ್ಞವಾಗಿ ಬಲಿಕೊಡುವನು.

......ಇದು "(ಇಸ್ರಾಯೇಲ್) ಜನರಿಗೋಸ್ಕರವಾದದ್ದು"......

........ಬೇರೆ ಎಲ್ಲಾ ಯಜ್ಞಬಲಿಯ ವಿಧಾನಗಳು –

**"ಹೋರಿಯ ರಕ್ತದಿಂದ ಮಾಡಿದಂತೆಯೇ"** ಆತನು ಮಾಡುತ್ತಾನೆ.

........ಕೊನೆಯದಾಗಿ ಆರೋನನು ಆಹೋರಿಯ ರಕ್ತವನ್ನು "ಮಹಾಪವಿತ್ರಸ್ಥಾನ"ದೊಳಗೆ ತೆಗೆದುಕೊಂಡು ಹೋಗಿ ಅದನ್ನು "ಕೃಪಾಸನದ ಮೇಲೆಯೂ ಎದುರಾಗಿಯೂ" ಶಿಲುಬೆಯ ಆಕಾರದಲ್ಲಿ ಚಿಮಿಕಿಸುತ್ತಾನೆ. ಇವಾಗ ಏಳು ಸಾರಿ ಅಲ್ಲ ಆದರೆ ಒಂದೇ ಒಂದು ಸಾರಿ ಮಾತ್ರ.

### ಇವೆಲ್ಲಾ ಏನ್ನನ್ನು ಸೂಚಿಸುತ್ತದೆ?

ಇವೆಲ್ಲವೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮಹಾ ದೋಷಪರಿಹಾರಕ ಯಜ್ಞಬಲಿಯನ್ನು ಹಿಂಬಾಲಿಸುವ ಬಲಿಯನ್ನು ಸೂಚಿಸುತ್ತದೆ.

### ಹೌದು! ಕ್ರೈಸ್ತರಿಗೆ ಈ ಯಜ್ಞಬಲಿಯನ್ನು ಅರ್ಪಿಸುವ ಅವಕಾಶ ಈ ದಿನಗಳಲ್ಲಿ ತೆರೆದಿದೆ!!

ಇದು ಅನೇಕ ಕ್ರೈಸ್ತರಿಗೆ ಆಶ್ಚರ್ಯವಾಗಿಯೂ ಮತ್ತು ಆಘಾತವಾಗಿಯೂ ಇದೆ. ಏಕೆಂದರೆ ಅವರು ಅಂದುಕೊಂಡಿರುವದು ಮತ್ತು....... ನಂಬಿರುವದೂ ಸಹ ಏನೆಂದರೆ ದೇವರು ಅವರಲ್ಲಿ ಎದುರುನೋಡುವದೇನೆಂದರೆ ಅವರು ತನ್ನ (ದೇವರ) ಮಗನಾದ ಯೇಸು ಕ್ರಿಸ್ತನನ್ನು ನಂಬುವದು, ಮತ್ತು ಎಷ್ಟು ಸಾಧ್ಯವೋ ಅಷ್ಟೂ ಜನ ಅವಿಶ್ವಾಸಿಗಳನ್ನು ವಿಶ್ವಾಸಿಗಳನ್ನಾಗಿ ಮಾಡುವದಾಗಿದೆ!

ಮತ್ತು ಒಬ್ಬ ಕ್ರೈಸ್ತನಾಗಿ ಅಷ್ಟುಕೆಲಸಮಾತ್ರ ಒಳಗೊಂಡಿದೆ!

**ಆದರೆ, ಅದು ಹಾಗಲ್ಲ!**

ನಾವು ಮೊದಲೇ ನೋಡಿದಂತೆ ಯೇಸುವಿನ ಮೇಲೆ ನಂಬಿಕೆಯಿಡುವದು ಒಬ್ಬ ಕ್ರೈಸ್ತನ ಬೆಳವಣಿಗೆಯ ಮೊದಲ ಹಂತವಾಗಿದೆ – ಅದನ್ನು "ಕರೆಯಲ್ಪಟ್ಟ" ಹಂತ ಎಂದು ಹೇಳಲಾಗುತ್ತದೆ!!

ಈ "ವಿಶ್ವಾಸಿ"ಗಳನ್ನು ಸತ್ಯವೇದವು ಮುಂದಿನ ಹೆಜ್ಜೆಗೆ ಅಥವಾ ಹಂತಕ್ಕೆ ಏರಿ ಹೋಗಬೇಕು ಎಂದು ಪ್ರೋತ್ಸಾಯಿಸುತ್ತದೆ ಎಂದು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## 1 ಪೇತ್ರನು 2:21

**"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು."**

ಇದನ್ನು ನೀವು ನೋಡಿದಿರಾ?! ಹೌದು! "ವಿಶ್ವಾಸಿ"ಗಳು ಮುಂದೆ ಬೆಳೆದು...... "ಹಿಂಬಾಲಕ"ರಾಗಬೇಕು. ನಿಜಾಂಶವೇನೆಂದರೆ ಈ ಒಂದು ಕಾರಣಕ್ಕಾಗಿಯೇ ನಾವು ಯೇಸುವಿನಲ್ಲಿ ವಿಶ್ವಾಸಿಗಳಾಗಿದ್ದೇವೆ ಎಂದು ಕೆಳಗಿನ ವಾಕ್ಯದಲ್ಲಿ ಮತ್ತೆ ಓದುತ್ತೇವೆ –

## ಫಿಲಿಪ್ಪಿಯವರಿಗೆ 1:29

**"ಹೇಗೆಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು."**

**ಇಲ್ಲಿ ಬಹಳ ಸ್ಪಷ್ಟವಾಗಿ ಕೊಟ್ಟಿಲ್ಲವೇ?!**

ಈಗ ಅದೇ ಸತ್ಯವೇದವು ನಮಗೆ ಏನ್ನನ್ನು ಬೋಧಿಸುತ್ತದೆ ಎಂದರೆ –

**"..........ಹೀಗೆ ಕರೆಯಲ್ಪಟ್ಟವರು ಬಹುಜನ, ಆಯಲ್ಪಟ್ಟವರು ಸ್ವಲ್ಪಜನ ಅಂದನು."**
**ಮತ್ತಾಯ 22:14**

ಈಗ ಈ "ಸ್ವಲ್ಪ" ಕ್ರೈಸ್ತರು ಯೇಸುವನ್ನು ಹಿಂಭಾಲಿಸಿ ತಮ್ಮ ಜೀವವನ್ನು ಸಜೀವ ಯಜ್ಞವಾಗಿ ಒಪ್ಪಿಸುವವರನ್ನು ಇಲ್ಲಿ....... "ಎರಡು ಹೋತಗಳಿಗೆ" ಸೂಚಿಸಲಾಗಿದೆ.

ಹೌದು! ಈ ಕ್ರೈಸ್ತರು ಅಪೋಸ್ತಲನಾದ ಪೌಲನ ವಾಕ್ಯಗಳಿಗೆ ಗಮನ ಕೊಡುವವರಾಗಿದ್ದಾರೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ರೋಮಾಪುರದವರಿಗೆ 12:1

**"ಆದದರಿಂದ ಸಹೋದರರೇ (ವಿಶ್ವಾಸಿಗಳೇ), ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ.........."**

ಸಜೀವ ಯಜ್ಞವಾಗಿ ಯೇಸುವಿನ ಹೆಜ್ಜೆಜಾಡನ್ನು ಹಿಂಭಾಲಿಸುವ ಒಬ್ಬ ವ್ಯಕ್ತಿಯ ಈ "ಅರ್ಪಣೆಯು" ಒಂದು ಒಡಂಬಡಿಕೆಯ ಮೂಲಕ ನೆರವೇರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 50:5 – "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಗೆ ಕರಕೊಂಡು ಬನ್ನಿರಿ......."**

ಈ ಒಡಂಬಡಿಕೆಯನ್ನು "ನೀರಿನಲ್ಲಿ ಮುಳುಗುವಿಕೆ" ಅಥವಾ "ದೀಕ್ಷಾಸ್ನಾನ"ವನ್ನು ಸೂಚಿಸುತ್ತದೆ.

**ನಮ್ಮಲ್ಲಿ ಈಗ ಯಾರ್ಯಾರಿಗೆ ಯಜಮಾನನಾದ ಯೇಸುವಿನ ಹೆಜ್ಜೆಜಾಡನ್ನು ಹಿಂಬಾಲಿಸಲು ಆಸಕ್ತಿ ಇದೆಯೋ....... ಅಂಥವರು ಈ ಛಾಯೆಯಲ್ಲಿ ಕೊಟ್ಟಿರುವ ವಿವರಗಳನ್ನು ಅಭ್ಯಾಸ ಮಾಡುವಾಗ ಬೆಲೆಯುಳ್ಳ ಅಮೂಲ್ಯವಾದ ಪಾಠಗಳನ್ನು ಕಲಿತುಕೊಳ್ಳೋಣ.**

ಆ ಎರಡು ಹೋತಗಳನ್ನು ದೇವದರ್ಶನದ "ಗುಡಾರದ" ಬಾಗಲಲ್ಲಿ ನಿಲ್ಲಿಸಿದ ಮೇಲೆ ಆರೋನನು "ಚೀಟು"ಗಳನ್ನು ಬರೆದುಹಾಕುತ್ತಾನೆ!

**ಇದು ಏನ್ನನ್ನು ಸೂಚಿಸುತ್ತದೆ?**

ಇದು "ಎರಡು ಹೋತ"ಗಳ ನಡುವಿನ ಆಯ್ದುಕೊಳ್ಳುವಿಕೆಯ ವಿಧಾನವನ್ನು ಸೂಚಿಸುತ್ತದೆ ಅಥವಾ ಎರಡು ವರ್ಗಗಳಾಗಿ ವ್ಯಕ್ತವಾಗುವ ಕ್ರೈಸ್ತರಲ್ಲಿರುವ ಯಜ್ಞಬಲಿಯವರು ಅಥವಾ "ಹಿಂಭಾಲಕರ ಆಯ್ಕೆಯ ವಿಧಾನವನ್ನು ಸೂಚಿಸುತ್ತದೆ. "ಚೀಟು" ಹಾಕುವದು ಎಂದರೆ ಕರ್ತನ ದೃಷ್ಟಿಯಿಂದ ಈ ವಿಧಾನದ ಆಯ್ಕೆಯು ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿದೆ (ಪಕ್ಷಪಾತವಿಲ್ಲದಾಗಿದೆ)!

**ಹೌದು! ಯಾರ್ಯಾರು ಯಜ್ಞಬಲಿಯ ಮೂಲಕ ಒಡಂಬಡಿಕೆ ಮಾಡಿ ಅದನ್ನು ......... "ನೆರವೇರಿಸುವುದರಲ್ಲಿ" ಅತ್ಯಾಸಕ್ತಿ ಮತ್ತು ನಂಬಿಗಸ್ತಿಕೆಯನ್ನು ವ್ಯಕ್ತಪಡಿಸುತ್ತಾರೋ ಅಂಥವರಿಗೆ ಕರ್ತನು ಪಕ್ಷಪಾತವಿಲ್ಲದೆ ಆಯ್ಕೆಮಾಡಿಕೊಳ್ಳುವನು.**

ಈ ರೀತಿಯಾದ "ಅತ್ಯಾಸಕ್ತಿ" ಮತ್ತು "ನಂಬಿಗಸ್ತಿಕೆ" ವರ್ಗದ ಒಡಂಬಡಿಕೆ ಮಾಡಿಕೊಂಡ ಕ್ರೈಸ್ತರು ಅಥವಾ "ಆಯ್ದುಕೊಳ್ಳಲ್ಪಟ್ಟವರ"ನ್ನು –

## "ಯೆಹೋವನ ಹೋತ" ಎಂದು ಈ ಇಲ್ಲಿ ಸೂಚಿಸಲಾಗಿದೆ.

ಯೇಸುವಿನ ನಂಬಿಗಸ್ತಿಕೆಯಾದ ಕ್ರೈಸ್ತ ಹಿಂಭಾಲಕ "ವರ್ಗದ"ವರಿಗೆ ಉಂಟಾಗುವ ಅನುಭವಗಳನ್ನು ಕುರಿತು ಆ "ಯೆಹೋವನ ಹೋತ" ವನ್ನು ಆರೋನನು ಏನು ಮಾಡುತ್ತಾನೆ ಎಂಬುದರಲ್ಲಿ ಸೂಚಿಸಲಾಗಿದೆ!

ಈಗ ನಾವು ಅದರ ವಿವರಗಳು ಮತ್ತು ಅರ್ಥಗಳನ್ನು ಕುರಿತು ನೋಡೋಣ –

**" .......ಅದನ್ನು (ಹೋತ) ಆರೋನನು ದೋಷ ಪರಿಹಾರಕ ಯಜ್ಞರೂಪವಾಗಿ ಸಮರ್ಪಿಸಬೇಕು."**

ಇದು ನಮ್ಮ ತಲೆ ಕರ್ತನಾದ ಯೇಸುವಿನ ಕೆಲಸವನ್ನು ಸೂಚಿಸುತ್ತದೆ. ಅದೇನೆಂದರೆ, ಒಂದು ಶರೀರದ ಅಂಗವನ್ನು "ತನ್ನ ಶರೀರ"ದ ಅವಯವಾಗಿ ಅಂಗೀಕರಿಸಿಕೊಂಡಾಗ (ಅವನಿಗೆ/ಅವಳಿಗೆ) ಉಂಟಾಗುವ ಆತನ ಮರಣದ ಅನುಭವಗಳನ್ನು ವ್ಯಕ್ತವಾದದನ್ನು ಅಪೋಸ್ತಲನಾದ ಪೌಲನಿಗೆ ಉಂಟಾದದ್ದರಲ್ಲಿ ತೋರಿಸುತ್ತಾನೆ –

### ಅಪೊಸ್ತಲರ ಕೃತ್ಯಗಳು 9:16

**"ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬುದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು."**

**ಇದನ್ನು ನೀವು ನೋಡಿದಿರಾ?!**

ಹೌದು! ಸ್ವತಃ ಯೇಸುವೇ ಶರೀರದ ತಲೆಯಾಗಿ ಈ ಹೋತವು "ಪ್ರತಿಷ್ಠೆ" ಮಾಡಿದ ನಂತರ ಅದನ್ನು "ಕೊಂದು" ಅದಕ್ಕೆ ಬೇಕಾದ ಮಾರ್ಗದರ್ಶನವನ್ನು, ಜೀವನದ ಎಲ್ಲಾ ಅನುಭವಗಳನ್ನು ನೇಮಕಮಾಡುತ್ತಾನೆ!

ಈಗ ನಾವು ಮುಂದೆ ಓದೋಣ –

**"........ದೋಷಪರಿಹಾರಕಯಜ್ಞಕ್ಕಾಗಿ ಹೋತ........"**

ಇಲ್ಲಿ ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು, ಅದೂ ಬಹಳ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು!

ಇಡೀ ಲೋಕಕ್ಕೆ ಬೇಕಾದ ಬಿಡುಗಡೆಗೆ ಈಡುಬಲಿಯನ್ನು ಕೊಡಲು ಸಭೆಯು ಎಂದಿಗೂ ಯಜ್ಞಬಲಿಯನ್ನು ಅರ್ಪಿಸಲು ಸಾಧ್ಯವಿಲ್ಲ. ಅದಕ್ಕೆ ಬೇಕಾದದ್ದು ಒಂದೇ ಒಂದು......ಅದೇನೆಂದರೆ ಒಬ್ಬೇ ಒಬ್ಬ ಪರಿಪೂರ್ಣ ಮಾನವನ ಜೀವ ಮತ್ತು ಅದು ಪರಿಪೂರ್ಣವಾದ ಮನುಷ್ಯನಾದ ಕ್ರಿಸ್ತಯೇಸು" ಮತ್ತು ಆತನ ತ್ಯಾಗದಬಲಿಯಿಂದ ನೆರವೇರಿತು!

ಇದು ಬಿಟ್ಟು ಬೇರೆ ಬಲಿಯು ಅವಶ್ಯವಿರಲಿಲ್ಲ!



ಆದರೆ ಸಭೆಯ ಬಲಿಯು ಈಗ ದೇವರಿಗೆ ಅಂಗೀಕಾರ ಮತ್ತು ಪರಿಶುದ್ದ ಎಂದು ಎಣಿಸಲ್ಪಡುವದು ಈಡುಬಲಿಯ "ಅರ್ಹತೆ"ಯಿಂದ (ಮೌಲ್ಯ) ಉಂಟಾಗುತ್ತದೆ. ಈ ಈಡುಬಲಿಯು ಸಭೆಯ ಪ್ರತಿಯೊಬ್ಬ ಅಂಗಗಳ ಪಾಪಗಳನ್ನು ಮುಚ್ಚುತ್ತದೆ. ಮತ್ತು ಈ ಸಭೆಯ "ವರ್ಗ"ದವರು ನಂತರ "ಆತನ ದೇಹದ" ಅಂಗಗಳಾಗಿರುವರು. ನಂತರ

"ದೋಷಪರಿಹಾರ" ಯಜ್ಞ ಎಂದು ಕರೆಯಲ್ಪಡುವ ವಿಭಾಗದಲ್ಲಿ ಲೆಕ್ಕಿಸಲ್ಪಡುವರು.

ನಂತರ ಅಪ್ಪೋ.ಪೌಲನು ಕೆಳಗಿನ ವಾಕ್ಯದಲ್ಲಿ ವಿವರಿಸುವಂತೆ ಅವರು ಪಾಲುದಾರರಾಗುತ್ತಾರೆ ಎಂದು ಓದುತ್ತೇವೆ –

## ಕೊಲೊಸ್ಸೆಯವರಿಗೆ 1:24

**"......ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ."**

ಹೌದು! ಯೇಸುವಿನ ಅನುಭವಗಳನ್ನು "ರುಚಿಸಿ"ನೋಡುವದಕ್ಕೂ ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯುವದಕ್ಕೂ ಇದೊಂದು ದೊಡ್ಡ ಸವಲತ್ತು ಮತ್ತು ಅವಕಾಶವಾಗಿದೆ!!

ಈ ಸಭೆಯ ದೋಷಪರಿಹಾರ ಯಜ್ಞವು ಯೇಸುವಿನ "ಅರ್ಹತೆ"ಯ (ಮೌಲ್ಯದ) ಮೂಲಕ ಮಾತ್ರ ಸಾಧ್ಯವಾಗುತ್ತದೆ.

**ಆದ್ದರಿಂದ ನಾವು ನೋಡುವದೇನೆಂದರೆ.......ಆರೋನನು 'ಹೋತವನ್ನು' 'ದೋಷ ಪರಿಹಾರ ಯಜ್ಞವಾಗಿ' ಸಮರ್ಪಿಸುತ್ತಾನೆ!!**

**ಹೌದು! ಸಭೆಯ ಯಜ್ಞಬಲಿಯು ಯೇಸುವಿನಲ್ಲಿ ಮತ್ತು ಯೇಸುವಿನ ಮೂಲಕ ಸಾಧ್ಯವಾಗುತ್ತದೆ. ಇದು ಸ್ವತ ಯೇಸುವೇ ತನ್ನ ಶರೀರದ ಅಂಗಗಳಿಗಾಗಿ ತನ್ನನ್ನು ಯಜ್ಞ ಬಲಿಯಾಗಿ ಸಮರ್ಪಿಸುತ್ತಾನೆ!**

ಈಗ ನಾವು ಮುಂದಿನ ವಿಷಯವನ್ನು ಕುರಿತು ಓದೋಣ.......

**ಅವನು ಜನರಿಗೋಸ್ಕರವಾದ.........**

**ಇದರ ಅರ್ಥವೇನು?**

ಇದು ಈ ಯಜ್ಞಬಲಿಯ "ಲಾಭ"ವು ಲೋಕದ ಮನುಷ್ಯಜಾತಿಯ ಎಲ್ಲಾ...... "ಜನರಿಗೂ" ........ಹೋಗಿ ಸೇರುತ್ತದೆ (ಉಂಟಾಗುತ್ತದೆ)!

ಯೇಸುವಿನ (ಹೋರಿಯ) ಯಜ್ಞಬಲಿ ಪೂರ್ಣವಾದ ನಂತರ, ಇದರ ಲಾಭವು ಸಭೆಗೆ ಹೋಗಿ ಸೇರುತ್ತದೆ –

ಈ ಸುವಾರ್ತಾಯುಗದ "ಅತಿ ದೊಡ್ಡ ರಕ್ಷಣೆ"ಯನ್ನು ಪಡೆದುಕೊಳ್ಳಲು ಅವಕಾಶ ಉಂಟಾಗಿದೆ.

ನಂತರ ನಾವು ಹೀಗೆ ಓದುತ್ತೇವೆ –

**"ಹೋರಿಯ ರಕ್ತದಿಂದ ಮಾಡಿದಂತೆಯೇ ಇದರ ರಕ್ತದಿಂದಲೂ ಮಾಡಿ........."**

ಇದು ಈ "ವರ್ಗ"ದಲ್ಲಿ ಉಂಟಾಗುವ ಅನುಭವಗಳು

........ಅವರ ಯಜಮಾನನ ಅನುಭವಗಳಂತಿವೆ ಎಂದು ಸೂಚಿಸುತ್ತದೆ. ಮತ್ತು ಅವರು ಇದಕ್ಕಾಗಿಯೇ

ಕರೆಯಲ್ಪಟ್ಟವರಾಗಿದ್ದಾರೆ ಎಂದು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇ:ವೆ –

**ರೋಮಾಪುರದವರಿಗೆ 8:29**

**"ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ ಮೊದಲೇ ನೇಮಿಸಿದನು."**

ಆಹಾ, ಹೌದು! ಅವರೆಲ್ಲರು ಮಗನ ನಕಲು ಆಗುವವರಾಗಿದ್ದಾರೆ, ಮತ್ತು ಇದನ್ನೇ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಪ್ರಕಟನೆ 14:4**

**"ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನ ಹಿಂದೆ ಹೋಗುವರು."**

ಹೌದು! ಇದು "ಕರ್ತನ ಹೋತ"ದ ವರ್ಗದವರು ತಮ್ಮ ಯಜ್ಞ ಬಲಿಯ ಜೀವಿತದಲ್ಲಿ ತಮ್ಮ ಕರ್ತನಹೆಜ್ಜೆಯಜಾಡನ್ನು ಮತ್ತು ಉದಾಹರಣೆಯನ್ನು ಹೇಗಿದೆಯೋ ಹಾಗೆಯೇ ಹಿಂಭಾಲಿಸುವದನ್ನು ಸೂಚಿಸುತ್ತದೆ.

ಕೊನೆಯದಾಗಿ, ಆರೋನನು "ಕರ್ತನ ಹೋತ"ದ ರಕ್ತವನ್ನು ಮಹಾಪರಿಶುದ್ಧ ಸ್ಥಾನದೊಳಗೆ ತೆಗೆದುಕೊಂಡು ಹೋಗುವದನ್ನು ನಾವು ನೋಡುತ್ತೇವೆ.

**ಅಲ್ಲಿ ಆತನು ಏನು ಮಾಡುತ್ತಾನೆ?**

[ "**ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಕೃಪಾಸನದ ಪೂರ್ವಭಾಗದ ಮೇಲೆ ಮತ್ತು ಕೃಪಾಸನದ ಎದುರಾಗಿಯೂ ಚಿಮಿಕಿಸುತ್ತಾನೆ**"]

ಇದನ್ನೇ ಮಹಾಯಾಜಕನಾದ ಆರೋನನು ಮಾಡುತ್ತಾನೆ.

ಇದು ಹೇಗೆ ಕರ್ತನು (ಯೇಸು) ಕೊನೆಯದಾಗಿ "ರಕ್ತ"ವನ್ನು ಅಥವಾ ಈ "ವರ್ಗ"ದ ಬಲಿಯ ಜೀವಿತವನ್ನು ತೆಗೆದುಕೊಂಡು ತನ್ನದೆಂದು ಎಣಿಸುತ್ತಾನೆ – ತನ್ನ ಶರೀರದ ಅಂಗವಾಗಿ ಎಣಿಸಿ –

ಅದನ್ನು ದೈವೀಕ ನೀತಿಗೆ (ಕೃಪಾಸನಕ್ಕೆ) –

– **"ಶಿಲುಬೆಯ" ಆಕಾರದಲ್ಲಿ "ಒಪ್ಪಿಸುತ್ತಾನೆ ಎಂದು ಸೂಚಿಸುತ್ತದೆ.**

**ಇದರ ಅರ್ಥವೇನು?**

ಇದು "ಶಿಲುಬೆ"ಯ ಅರ್ಹತೆಯ ಅನ್ವಯವನ್ನು (ಉಪಯೋಗವನ್ನು) ಸೂಚಿಸುತ್ತದೆ –

**.......ಈಡುಬಲಿ** -

ಈ ಸಲ – ಎರಡನೆಯ ಸಲ..... ಈ ಲೋಕದ ಪಾಪಕ್ಕಾಗಿಯಾಗಿದೆ, ಏಕೆಂದರೆ "ಯೇಸುವಿನ ರಕ್ತ" ಮತ್ತು ಆತನ ಯಜ್ಞ ಬಲಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**1 ಯೋಹಾನ 2:2**

"ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ."

**ಹೌದು! ಇದು ಸ್ಪಷ್ಟವಾಗಿಲ್ಲವೇ?!**

**ಹೌದು! ನಂತರ ಆ ಕಾಲದಲ್ಲಿ ಎಲ್ಲಾ ಲೋಕದವರು ಮರಣದಿಂದ (ಎದ್ದು) ಜೀವವನ್ನು ಪಡೆಯುತ್ತಾರೆ.......**
**ಮತ್ತು ರಕ್ಷಣೆಹೊಂದಿ ಜೀವವನ್ನು ಪಡೆಯುತ್ತಾರೆ!!**

ಈಗ ನಾವು ಚೀಟುಬಿದ್ದ ಕೊನೆಯ "ಹೋತ"ವನ್ನು ಕುರಿತು ನೋಡೋಣ –

## ಅಜಾಜೇಲನ ಹೋತ

ಇದರ ವಿವರವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**ಯಾಜಕಕಾಂಡ 16:21 22**

ಅದರ ತಲೆಯ ಮೇಲೆ ಎರಡು ಕೈಗಳನ್ನೂ ಇಟ್ಟು ಇಸ್ರಾಯೇಲ್ಯರ ಎಲ್ಲಾ ಪಾಪಗಳನ್ನೂ ದ್ರೋಹಗಳನ್ನೂ ಅಪರಾಧಗಳನ್ನೂ ಯೆಹೋವನಿಗೆ ಅರಿಕೆ ಮಾಡಿ ಆ ಹೋತನ ತಲೆಯ ಮೇಲೆ ಹೊರಿಸಿ ಅರಣ್ಯಕ್ಕೆ ಕಳುಹಿಸಿಬಿಡಬೇಕು.
......ಅದನ್ನು ಅರಣ್ಯಕ್ಕೆ ತೆಗೆದುಕೊಂಡುಹೋಗಿ ಅಲ್ಲೇ ಬಿಟ್ಟುಬಿಡಬೇಕು.."

**ಇದು ಏನ್ನನ್ನು ಸೂಚಿಸುತ್ತದೆ??**



ಅಜಾಜೇಲನ ಹೋತವು ಕರ್ತನನ್ನು ಹಿಂಭಾಲಿಸಲು ಮುಂದೆ ಬಂದು "ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡು ಕರ್ತನ ಹೆಜ್ಜೆಜಾಡನ್ನು ಹಿಂಭಾಲಿಸಲು ಸಂಪೂರ್ಣವಾಗಿ ಒಡಂಬಡಿಕೆ ಮಾಡಿಕೊಂಡ ಎರಡನೆಯ ವರ್ಗದವರನ್ನು ಸೂಚಿಸುತ್ತದೆ.

**ಆದರೆ ಸತ್ತವರಾಗಿರದೆ ಅವರು....... ಜೀವದಿಂದ ಇರುವವರಾಗಿ ಉಳಿದರು!!**

## ಇದರ ಅರ್ಥವೇನು?

"ಜೀವಂತ"ವಾಗಿ ಉಳಿದವರು ಎಂದರೆ ಅವರು ಮಾಡಿದ "ಯಜ್ಞದ ಮೂಲಕ ಒಡಂಬಡಿಕೆ"ಯನ್ನು ಸರಿಯಾಗಿ ಗಮನ ಕೊಡದೆಯೂ ಮತ್ತು ನಂಬಿಗಸ್ತರಾಗದೆಯೂ ಇದ್ದು, ಅವರು ಈ ಲೋಕದ ಆತ್ಮಕ್ಕೆ ಮತ್ತು......

ಚಿಂತೆಗಳಿಗೆ ಹೆಚ್ಚು ಗಮನ ಕೊಡುತ್ತಾರೆ ಎಂದು ಸೂಚಿಸುತ್ತದೆ.

ಈ ವರ್ಗದವರನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸೂಚಿಸಲಾಗಿದೆ –

### ಮತ್ತಾಯ 13:7

**"ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು ಅವುಗಳನ್ನು ಅಡಗಿಸಿಬಿಟ್ಟವು."**

ಹೌದು! "ಅಜಾಜೇಲನ ಹೋತ"ದ ವರ್ಗದವರು "ಮುಳ್ಳುಗಿಡ"ಗಳ ಮಧ್ಯದಲ್ಲಿರುವರು ಎಂದು ಹೇಳಲಾಗುತ್ತದೆ.

## ಈ ಮುಳ್ಳುಗಿಡಗಳು ಎಂದರೇನು?

ಇದರ ಅರ್ಥವಿವರಣೆಯನ್ನು ಸ್ವತಃ ಕರ್ತನೇ ಹೇಳುವುದನ್ನು ನಾವು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

### ಮತ್ತಾಯ 13:22

**“ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ."**

ಹೌದು! ಈ ವರ್ಗದವರು ಸತ್ಯದ "ವಾಕ್ಯವನ್ನು ಕೇಳುತ್ತಾರೆ" ಮತ್ತು ಸಾಂಕೇತಿಕವಾದ ತಮ್ಮ "ಯಜ್ಞದ ಮೂಲಕಒಡಂಬಡಿಕೆ"ಯನ್ನು ಸಹ ಮಾಡುತ್ತಾರೆ ಮತ್ತು ಯಜಮಾನನ

ಹೆಜ್ಜೆಜಾಡನ್ನು ಅನುಸರಿಸಲು ಪ್ರಯತ್ನಿಸುತ್ತಾರೆ. ಆದರೆ ಕೆಳಗೆ ಕೊಟ್ಟಿರುವ ಸಂಕೇತದಂತೆ ಬೇಗನೆ "ಮುಳ್ಳುಗಿಡ"ಗಳಿಗೆ "ಅಡಗಿ"ಹೋಗುತ್ತಾರೆ –

**"ಪ್ರಪಂಚದ ಚಿಂತೆಯೂ"**

**"ಐಶ್ವರ್ಯದಿಂದುಂಟಾಗುವ ಮೋಸವೂ"**

**( ಈ ವಿಷಯದ ಆಳವಾದ ವಿವರಗಳನ್ನು ನಾವು ಅಭ್ಯಾಸ # 18 – ಯೇಸು ಕ್ರಿಸ್ತನ ಸಭೆ – ಭಾಗ –2 ರಲ್ಲಿ ನೋಡಿದ್ದೇವೆ )**

**ಹೌದು! ಈ ವರ್ಗದವರು ಅವರ ನಂಬಿಕೆಯನ್ನು...... ಕರ್ತನ ಮೇಲೆ ಮತ್ತು..... ಆತನ ವಾಕ್ಯದ ಮೇಲೆಯೂ ಕಾರ್ಯರೂಪಕ್ಕೆ ತರುವುದಿಲ್ಲ!**

ಏಕೆಂದರೆ ನಮ್ಮ ಕರ್ತನ ವಾಕ್ಯವು "ಈ ಲೋಕದ ಚಿಂತೆ" ಮತ್ತು ನಮ್ಮ ಮನಸ್ಸನ್ನು ಸೆರೆಹಿಡಿಯುವ
ಅದರ ಎಲ್ಲಾ ಕಳವಳವನ್ನು ಕುರಿತು ಹೀಗೆ ಹೇಳುತ್ತದೆ –

**ಇಬ್ರಿಯರಿಗೆ 13:5**

**"ನಿಮಗಿರುವವುಗಳಲ್ಲಿ ತೃಪ್ತರಾಗಿರಿ; ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ."**

ಹೌದು! ಸ್ವತಃ ದೇವರು ಯಜಮಾನನ ಹೆಜ್ಜೆಜಾಡನ್ನು ಹಿಂಭಾಲಿಸುವ ಪ್ರತಿಯೊಬ್ಬ ಹಿಂಭಾಲಕರಿಗೂ ಹೇಳುವದೇನೆಂದರೆ –

**'ಹೆದರಬೇಡ, ನಾನು ನಿನ್ನೊಂದಿಗಿದ್ದೇನೆ'!!**

## ನೀವು....... ಇದನ್ನು ನಂಬುತ್ತೀರಾ?

ಅನೇಕ ಕ್ರೈಸ್ತರಿಗೆ ಮತ್ತು ವಿಶೇಷವಾಗಿ ಈ "ಅಜಾಜೇಲನ ಹೋತ"ದ ವರ್ಗಕ್ಕೆ ಇವು ಕೇವಲ ವಾಕ್ಯಗಳಾಗಿವೆ ಮತ್ತು...... ನಿಜವಾಗಿಯೂ ಅವರು

**.......ನಂಬುವದಕ್ಕೆ ದೇವರ ವಾಗ್ದಾನಗಳು ಮತ್ತು**

**...ಅವುಗಳನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ಅನ್ವಯಿಸಲು ಮನಸ್ಸಿಲ್ಲದವರಾಗಿದ್ದಾರೆ!!**

ನಂತರ "ಐಶ್ವರ್ಯದಿಂದುಂಟಾಗುವ ಮೋಸ"ವು "ಈ ಲೋಕದ ಅವಶ್ಯ

ವಸ್ತು"ಗಳನ್ನು ಕುರಿತು ಸೂಚಿಸುತ್ತದೆ.

ಉದಾ: ಹೊಸ ಬಾಡಿಗೆ ಮನೆಗೆ ಬದಲಾಯಿಸುವದು, ಹೊಸ ಗಾಡಿಗಳು ಅಥವಾ ಮನೆಗೆ ಬೇಕಾದ ಅವಶ್ಯಕ ವಸ್ತುಗಳನ್ನು ಖರೀದಿಸುವದು. ಇತರೆ.

ಈ "ಅವಶ್ಯಕತೆಗಳು" ನಮ್ಮ ಸಮಯವನ್ನು ಸೆರೆಹಿಡಿದು, ಆ ಹೆಚ್ಚಿನ ಹಣಕ್ಕಾಗಿ ಸಾಲ ತೆಗೆದುಕೊಂಡು,

ಆ ಸಾಲ ತೀರಿಸಲು ಕೆಲವೊಮ್ಮೆ ಒಟ್ಟಿಗೆ ಎರಡು ಕೆಲಸಗಳು ಮಾಡುವದು ಅಥವಾ..... ಹೆಚ್ಚಿನ ಸಮಯತೆಗೆದುಕೊಂಡು ಆ ಕೆಲಸಗಳನ್ನು ಮಾಡಿ ಮುಗಿಸುವಂತಾಗುತ್ತದೆ!!

**ಹೀಗೆ ಮಾಡುವದರಿಂದ ಕ್ರೈಸ್ತ ಬೆಳವಣಿಗೆಗೆ ಭಕ್ತಿ ತೋರಿಸಲು ಬಹಳ ಕಡಿಮೆ ಸಮಯ ಅಥವಾ ಶಕ್ತಿ ಬೇಕಾಗುತ್ತದೆ.**

ಹೀಗೆ ನಮ್ಮ "ಅವಶ್ಯಕತೆಗಳ" ಆಯ್ಕೆಯನ್ನು ಕರ್ತನಿಗೆ ಒಪ್ಪಿಸಿ ಬಿಟ್ಟರೆ, ಆತನ ವಾಗ್ದಾನಗಳ ವಾಕ್ಯವು ಏನು ಹೇಳುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದೋಣ –

**ಮತ್ತಾಯ 6:33**

**"ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರೆಕುವದು."**

ಹೌದು! ನಮ್ಮ ಕರ್ತನು ನಮಗೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಒದಗಿಸುವ ವಾಗ್ದಾನಗಳನ್ನು ಮಾಡಿದ್ದಾನೆ!

ಮತ್ತು ಆತನು ಅದ್ಭುತವಾಗಿ ಆ ವಾಗ್ದಾನಗಳನ್ನು ನೆರವೇರಿಸುತ್ತಾನೆ!

ನೀವು ಯಾರಾದರು ನಂಬಿಗಸ್ತರಾದ ಕ್ರೈಸ್ತರನ್ನು ಕೇಳಿರಿ, ಮತ್ತು....... ಅವರು ನಿಮಗೆ ಹೇಳುವರು!

ಆದರೆ ಈ "ಅಜಾಜೇಲನ ಹೋತ"ದ ವರ್ಗದವರು ಕರ್ತನ ಮೇಲಿನ ಆ ನಂಬಿಕೆಯಲ್ಲಿ ಕೊರತೆಯುಳ್ಳವರಾಗಿದ್ದು

ಸ್ವಂತ ಇಚ್ಛೆಯಿಂದ ಅವರು ಮಾಡಿದ "ಯಜ್ಞದ ಮೂಲಕ ಒಡಂಬಡಿಕೆ"ಯನ್ನು ನೆರವೇರಿಸದೆ ಇದ್ದಾರೆ.

**ಆದ್ದರಿಂದ ಈ "ಅಜಾಜೇಲನ ಹೋತ"ವು ಜೀವಂತವಾಗಿದ್ದು ಮತ್ತು ಬಲಿಯಾಗದೆ..... ಅರಣ್ಯಕ್ಕೆ ಕಳುಹಿಸಲಾಗುತ್ತದೆ!!**

## ಇದರ ಅರ್ಥವೇನು?

"ಅರಣ್ಯ"ವು ಬೇರ್ಪಡುವಿಕೆಯನ್ನು ಸೂಚಿಸುತ್ತದೆ.

ಇಲ್ಲಿ ಈ "ವರ್ಗ"ವು ಅವರ ನ್ಯಾಯತೀರ್ಪಿನೊಳಗೆ ಈ ಎಡವಿಬೀಳುವ "ಮುಳ್ಳುಗಿಡ"ಗಳಿಂದ ಬೇರ್ಪಡಿಸಿ "ಒಡಂಬಡಿಕೆಗೆ" ಒಳಪಟ್ಟ ಶರೀರಕ್ಕೆ ನಾಶನದ ಸ್ಥಿತಿಯನ್ನು ಕಡ್ಡಾಯವಾಗಿ ತರಲಾಗುತ್ತದೆ.

ಇದರಿಂದ ಈಗಿನ ಕಾಲದಲ್ಲಿ ಬಹಳ ಸಾಮಾನ್ಯವಾಗಿರುವ ಒಂದು ವಿಷಯ ನಮ್ಮ ನೆನಪಿಗೆ (ಮನಸ್ಸಿಗೆ) ಬರುತ್ತದೆ!!

ಹೌದು! ವಿಧವಿಧವಾದ ಆರ್ಥಿಕ ತೊಂದರೆಗಳಿಂದ, ಕೆಲಸದ ಒಡೆಯರು ಮತ್ತು ಸಂಸ್ಥೆಗಳು –

**ಸರ್ಕಾರಗಳೂ ಸಹ, ತಮ್ಮ ಕೆಲಸದವರಿಗೆ**

"ವಿ.ಆರ್.ಎಸ್" ಅಥವಾ ಸ್ವಯಂ ನಿವೃತ್ತ ಸೇವೆಯನ್ನು ತೆಗೆದುಕೊಳ್ಳಬೇಕೆಂದು ಪ್ರೋತ್ಸಾಹಿಸುತ್ತಾರೆ.

**ಆದರೆ ಒತ್ತಡಗಳ ಇನ್ನೂ ಅಧಿಕವಾದಾಗ**

ಸಿ.ಆರ್.ಎಸ್ ಅಥವಾ ಕಡ್ಡಾಯ ನಿವೃತ್ತಿ ಸೇವೆಯನ್ನು ತೆಗೆದುಕೊಳ್ಳಲು ಹೇಳುತ್ತಾರೆ.

ಇಲ್ಲಿ, ಈ ಸ್ಥಿತಿಯಲ್ಲಿ ಕೆಲಸದವರಿಗೆ ಬೇರೆ ಯಾವ ಆಯ್ಕೆಯೂ ಇರುವುದಿಲ್ಲ!

ಇದೇ ರೀತಿಯಾಗಿ ಯೇಸುವಿನೊಂದಿಗೆ ಒಡಂಬಡಿಕೆ ಮಾಡಲ್ಪಟ್ಟ ಹಿಂಬಾಲಕರಿಗೆ ಆಗುತ್ತದೆ!!

ಒಂದು ಕಾಲವಿರುತ್ತದೆ, ಆ ಕಾಲದಲ್ಲಿ ಮಾತ್ರ ವಿ.ಎಸ್ ಅಥವಾ ಸ್ವಯಂ ಯಜ್ಞಬಲಿಯನ್ನು ಅರ್ಪಿಸಲು ಸಾಧ್ಯವಾಗುತ್ತದೆ.

ಆದರೆ ಸಮಯ ಕಳೆದುಹೋದಂತೆ ಮತ್ತು ಆ ಅವಕಾಶಗಳನ್ನು ನಾವು ವ್ಯರ್ಥಮಾಡಿದಾಗ ನಾವು –

ಸಿ.ಎಸ್ ಅಥವಾ ಕಡ್ಡಾಯ ಯಜ್ಞಬಲಿಯನ್ನು ಅರ್ಪಿಸಬೇಕಾಗುತ್ತದೆ!!

ಇದನ್ನು ಕುರಿತು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 3:15**

**"ಒಬ್ಬನು ಕಟ್ಟಿದ್ದು ಸುಟ್ಟುಹೋದರೆ ಅವನಿಗೆ ಸಂಬಳವು ನಷ್ಟವಾಗುವದು. ತಾನಾದರೋ ರಕ್ಷಣೆ ಹೊಂದುವನು,**
**ಆದರೆ ಬೆಂಕೆಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು."**

ಹೌದು! ಈ ಬೆಂಕೆಯ ಪರೀಕ್ಷೆಯು ಬಹಳ ಕಠೋರವಾಗಿರುವವು

ಉದಾ: ಬಹಳ ನೋವು ಇರುವ ವ್ಯಾಧಿಗಳು,........ ಕುಟುಂಬದಲ್ಲಿ ವಿಪತ್ತು, ......ವ್ಯಾಪಾರದಲ್ಲಿ ನಷ್ಟ ಇತರೆ. ಇದರಿಂದ ಅವರು ಅವರು ಸೋತುಹೋದವರೆಂದು ಮನವರಿಕೆಯಾಗಿ ತಾವಾಗಿಯೇ ತಮ್ಮ "ಬಲಿಯ ಮೂಲಕ ಒಡಂಬಡಿಕೆ"ಯನ್ನು ನೆರವೇರಿಸುವರು.

ಆದ್ದರಿಂದ, ಇವರಿಗೆ ಮಾನಸಾಂತರ ಹೊಂದಲು ಮತ್ತು

ಕರ್ತನಿಗೆ ಅವರ (ಒಳ್ಳೆಯ) ಗುಣಗಳನ್ನು ನಿರೂಪಿಸಲು ಅವಕಾಶ ದೊರೆಯುವದು.

...ಮರಣ ಪರ್ಯಂತರದವರೆಗೂ!

.....ಮತ್ತು ಇವರು ಮಹಾಸಮೂಹ ವರ್ಗದವರಾಗಿದ್ದು ದೇವದೂತರ ಸ್ವಭಾವವನ್ನು ಹೊಂದಿ ಪರಲೋಕದ ರಕ್ಷಣೆಯನ್ನು ಪಡೆದುಕೊಳ್ಳುವರು!!


**ಆದ್ದರಿಂದ ಈ ಪಾಪನಿವಾರಣಾಬಲಿಯ ದಿನ ಮತ್ತು ಅದರ ಸಂಕೇತಗಳನ್ನು ನೋಡಿದ್ದೇವೆ ಮತ್ತು ಈ ಸುವಾರ್ತಾ ಯುಗದಲ್ಲಿನ - ಕ್ರೈಸ್ತರಾದ "ನಮಗೆ" ....... ಇದೊಂದು ದೊಡ್ಡ ಪಾಠವಾಗಿದೆ!**


ಕೊನೆಯದಾಗಿ ಈ ಇಸ್ರಾಯೇಲಿನ ಪಾಪನಿವಾರಣಾ ಬಲಿಯ ದಿನದ ಕಾಲವು ಒಂದು ಪೂರ್ತಿ ದಿನವಾಗಿದೆ, ಇದು ಏನ್ನನ್ನು ಸೂಚಿಸುತ್ತದೆ ಅಂದರೆ

....... "ಮೇಲಾದ (ಉತ್ತಮವಾದ) ಯಜ್ಞ ಬಲಿ"ಗಾಗಿಯೇ ಒಂದು ಪೂರ್ತಿ ಯುಗದ ಸಮಯವಾಗಿದೆ.

ಹೌದು! ಈಗಿರುವ ಮತ್ತು ಬೇಗನೆ ಮುಗಿಯಲಿರುವ....... ಮಹಿಮೆಯುಳ್ಳ ಸುವಾರ್ತಾ ಯುಗವು!

.....ಆಮೆನ್.....






For Private Circulation Only

NOT FOR SALE

For more Subjects contact: MESSENGERS OF CHRIST E-mail: thekingdom1_6@yahoo.com